ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985

(1986ರ ಅಧಿನಿಯಮ ಸಂಖ್ಯೆ 2)

[ನವೆಂಬರ್ 11, 2021 ರಂದು ಇದ್ದಂತೆ]

# THE AGRICULTURAL AND PROCESSED FOOD PRODUCTS EXPORT DEVELOPMENT AUTHORITY ACT, 1985

**(Act No. 2 of 1986)**

**[As on 11th November 2021]**

## ಮುನ್ನುಡಿ

ದಿ ಅಗ್ರಿಕಲ್ಚರಲ್ ಆ್ಯಂಡ್ ಪ್ರೊಸೆಸ್ಡ್ ಫುಡ್ ಪ್ರೊಡಕ್ಟ್ಸ್ ಎಕ್ಸ್‌ಪೋರ್ಟ್ ಡೆವಲಪ್‌ಮೆಂಟ್ ಅಥೋರಿಟಿ ಆ್ಯಕ್ಟ್, 1985 (ಆ್ಯಕ್ಟ್ ನಂ.2 ಆಫ್ 1986)–ಇದಕ್ಕೆ ದಿನಾಂಕ: 17.08.2021ರಂದು ಭಾರತದ ಘನತೆವೆತ್ತ ರಾಷ್ಟ್ರಪತಿಗಳ ಅನುಮೋದನೆ ದೊರೆತಿದ್ದು, ಇದರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು ದಿನಾಂಕ:11–11–2021 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 51ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 157 ರಿಂದ 173 ರವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

ನವದೆಹಲಿ

ಡಾ. ರೀಟಾ ವಸಿಷ್ಠ
ಕಾರ್ಯದರ್ಶಿ
ಭಾರತ ಸರ್ಕಾರ

## PREFACE

This edition of THE AGRICULTURAL AND PROCESSED FOOD PRODUCTS EXPORT DEVELOPMENT AUTHORITY ACT, 1985 (Act No.2 of 1986) which has been approved by His Excellency the President of India on 17.08.2021 contains the authoritative text of that Act in Kannada and it was published in the Gazette of India Extraordinary, Part IX, Section 1, No.1, Vol.51, dated 11-11-2021 from pages 157 to 173.

This Kannada Text was published under the Authority of the President under clause (a) of Section 2 of the Authoritative Texts (Central Laws) Act, 1973 and on such publication, it became the authoritative text of that Act in Kannada.

New Delhi

Dr. Reeta Vasishta
Secretary
Government of India

# ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985

## ಪ್ರಕರಣಗಳ ಅನುಕ್ರಮಣಿಕೆ

ಪ್ರಕರಣಗಳು:


### ಅಧ್ಯಾಯ I

#### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ

### ಅಧ್ಯಾಯ II

#### ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ

4. ಪ್ರಾಧಿಕಾರದ ಸ್ಥಾಪನೆ ಮತ್ತು ರಚನೆ
5. ಅಧ್ಯಕ್ಷನ ಸಂಬಳ ಮತ್ತು ಭತ್ಯೆಗಳು ಮತ್ತು ಸೇವೆಯ ಇತರ ಷರತ್ತುಗಳು ಮತ್ತು ಸದಸ್ಯರ ಭತ್ಯೆಗಳು
6. ಅಧ್ಯಕ್ಷನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುವುದು
7. ಪ್ರಾಧಿಕಾರದ ಕಾರ್ಯದರ್ಶಿ ಮತ್ತು ಇತರ ಸಿಬ್ಬಂದಿ
8. ಪ್ರಾಧಿಕಾರಕ್ಕೆ ನೌಕರರನ್ನು ವರ್ಗಾವಣೆ ಮಾಡುವುದಕ್ಕೆ ವಿಶೇಷ ಉಪಬಂಧ
9. ಪ್ರಾಧಿಕಾರದ ಸಮಿತಿಗಳು
10. ಪ್ರಾಧಿಕಾರದ ಪ್ರಕಾರ್ಯಗಳು

10ಎ. ವಿಶೇಷ ಉತ್ಪನ್ನಗಳಿಗೆ ಸಂಬಂಧಿಸಿದ ಪ್ರಕಾರ್ಯಗಳು, ಇತ್ಯಾದಿ

11. ಪ್ರಾಧಿಕಾರವನ್ನು ರದ್ದುಪಡಿಸಲು ಅಧಿಕಾರ

### ಅಧ್ಯಾಯ III

#### ನೋಂದಣಿ

12. ರಫ್ತುಗಾರರ ನೋಂದಣಿ
13. ನೋಂದಣಿಗಾಗಿ, ನೋಂದಣಿಯನ್ನು ರದ್ದುಪಡಿಸುವುದಕ್ಕಾಗಿ ಅರ್ಜಿ, ಸಂದಾಯ ಮಾಡಬೇಕಾದ ಫೀಜು ಮತ್ತು ನೋಂದಣಿಗೆ ಸಂಬಂಧಿಸಿದ ಇತರ ವಿಷಯಗಳು
14. ರಫ್ತುಗಾರರು ಸಲ್ಲಿಸಬೇಕಾದ ವಿವರಪಟ್ಟಿಕೆಗಳು

### ಅಧ್ಯಾಯ IV

#### ಹಣಕಾಸು, ಲೆಕ್ಕ ಪತ್ರಗಳು ಮತ್ತು ಲೆಕ್ಕಪರಿಶೋಧನೆ

15. ಕೇಂದ್ರ ಸರ್ಕಾರದಿಂದ ಅನುದಾನಗಳು ಮತ್ತು ಸಾಲಗಳು

16. ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ನಿಧಿಯ ಸ್ಥಾಪನೆ
17. ಸಾಲ ಪಡೆಯಲು ಪ್ರಾಧಿಕಾರಕ್ಕೆ ಇರುವ ಅಧಿಕಾರ
18. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ

**ಅಧ್ಯಾಯ V**

**ಕೇಂದ್ರ ಸರ್ಕಾರದಿಂದ ನಿಯಂತ್ರಣ**

19. ಅನುಸೂಚಿತ ಉತ್ಪನ್ನಗಳ ಆಮದನ್ನು ಮತ್ತು ರಫ್ತನ್ನು ನಿಷೇಧಿಸಲು ಅಥವಾ ನಿಯಂತ್ರಿಸಲು ಅಧಿಕಾರ
20. ಕೇಂದ್ರ ಸರ್ಕಾರದಿಂದ ನಿರ್ದೇಶನಗಳು
21. ವಿವರಪಟ್ಟಿಕೆಗಳು ಮತ್ತು ವರದಿಗಳು

**ಅಧ್ಯಾಯ VI**

**ಸಂಕೀರ್ಣ**

22. ಸುಳ್ಳು ವರದಿಗಳನ್ನು ಸಲ್ಲಿಸಿದ್ದಕ್ಕೆ ದಂಡ
23. ಪ್ರಾಧಿಕಾರದ ಸದಸ್ಯನು ಅಥವಾ ಅಧಿಕಾರಿಯು, ಕರ್ತವ್ಯ ನಿರ್ವಹಿಸುತ್ತಿರುವಾಗ ಅವನಿಗೆ ಅಡ್ಡಿಪಡಿಸಿದುದಕ್ಕಾಗಿ ಮತ್ತು ಪುಸ್ತಕಗಳನ್ನು ಮತ್ತು ದಾಖಲೆಗಳನ್ನು ಹಾಜರುಪಡಿಸಲು ತಪ್ಪಿದ್ದಕ್ಕಾಗಿ ದಂಡನೆ
24. ಇತರ ದಂಡನೆಗಳು
25. ಕಂಪನಿಗಳಿಂದ ಅಪರಾಧಗಳು
26. ನ್ಯಾಯಾಲಯದ ಅಧಿಕಾರವ್ಯಾಪ್ತಿ
27. ಕೇಂದ್ರ ಸರ್ಕಾರದಿಂದ ಪೂರ್ವ ಮಂಜೂರಾತಿ
28. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ
29. ಅಧಿಕಾರದ ಪ್ರತ್ಯಾಯೋಜನೆ
30. ಈ ಅಧಿನಿಯಮದ ಜಾರಿಯನ್ನು ಅಮಾನತ್ತಿನಲ್ಲಿಡುವುದು
31. ಇತರ ಕಾನೂನುಗಳ ಅನ್ವಯಕ್ಕೆ ಪ್ರತಿಷೇಧ ಇಲ್ಲದಿರುವುದು
32. ನಿಯಮಗಳನ್ನು ರಚಿಸಲು ಅಧಿಕಾರ
33. ವಿನಿಯಮಗಳನ್ನು ರಚಿಸಲು ಅಧಿಕಾರ
34. ನಿಯಮಗಳನ್ನು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಮಂಡಿಸುವುದು
35. ಸಿಂಧುತ್ವ

**ಮೊದಲನೆ ಅನುಸೂಚಿ**

**ಎರಡನೆಯ ಅನುಸೂಚಿ**

# ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985

## (1986ರ ಅಧಿನಿಯಮ ಸಂಖ್ಯೆ 2)

[8ನೇ ಜನವರಿ, 1986.]

ಕೆಲವು ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತನ್ನು ಅಭಿವೃದ್ಧಿಗೊಳಿಸಲು ಮತ್ತು ಆ ಉತ್ಪನ್ನಗಳ ರಫ್ತಿಗೆ ಉತ್ತೇಜನ ನೀಡಲು ಪ್ರಾಧಿಕಾರವನ್ನು ಸ್ಥಾಪಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಅಧಿನಿಯಮ.

ಇದು, ಭಾರತ ಗಣರಾಜ್ಯದ ಮೂವತ್ತಾರನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ I

### ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ಅನ್ವಯವಾಗತಕ್ಕದ್ದು.

(3) ಇದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. **ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಪ್ರಾಧಿಕಾರ" ಎಂದರೆ, 4ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ;

---

* ಫೆಬ್ರವರಿ 13, 1986 ರಂದು ಜಾರಿಗೆ ಬಂದಿದೆ: ಅಧಿಸೂಚನೆ ಸಂಖ್ಯೆ ಎಸ್.ಓ 55 (ಇ), ದಿನಾಂಕ: 13-02-1986 ರ ಭಾರತ ವಿಶೇಷ ರಾಜಪತ್ರ, ಭಾಗ-II, ವಿಭಾಗ 3 (ii) ನೋಡಿ.

(ಬಿ) "ಅಧ್ಯಕ್ಷ" ಎಂದರೆ, ಪ್ರಾಧಿಕಾರದ ಅಧ್ಯಕ್ಷ;

(ಸಿ) "ರಫ್ತು" ಎಂದರೆ, ಭೂ, ಜಲ ಅಥವಾ ವಾಯುಮಾರ್ಗದ ಮೂಲಕ ಭಾರತದಿಂದ ಹೊರಗೆ ಸಾಗಿಸುವುದು;

(ಡಿ) "ರಫ್ತುಗಾರ" ಎಂದರೆ, 12ನೇ ಪ್ರಕರಣದ ಮೇರೆಗೆ ಅನುಸೂಚಿತ ಉತ್ಪನ್ನಗಳ ರಫ್ತುಗಾರ ಎಂದು ನೋಂದಾಯಿತನಾದ ವ್ಯಕ್ತಿ;

(ಇ) "ಸದಸ್ಯ" ಎಂದರೆ, ಪ್ರಾಧಿಕಾರದ ಸದಸ್ಯ ಮತ್ತು ಅಧ್ಯಕ್ಷನೂ ಒಳಗೊಳ್ಳುತ್ತಾನೆ;

(ಎಫ್) "ನಿಯಮಿಸಿದೆ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಜಿ) ಅನುಸೂಚಿತ ಉತ್ಪನ್ನಗಳ ಅಥವಾ ಸಂದರ್ಭಾನುಸಾರ, ವಿಶೇಷ ಉತ್ಪನ್ನಗಳ ಸಂಬಂಧದಲ್ಲಿ, "ಸಂಸ್ಕರಣೆ" ಎಂಬುದರಲ್ಲಿ, ಅಂಥ ಉತ್ಪನ್ನಗಳನ್ನು ಡಬ್ಬಿಗಳಲ್ಲಿ ತುಂಬುವುದು, ಶೈತ್ಯೀಕರಿಸುವುದು, ಒಣಗಿಸುವುದು, ಉಪ್ಪಿನಲ್ಲಿ ಊರಿಡುವುದು, ಹೊಗೆಯಾಡಿಸುವುದು, ಸಿಪ್ಪೆ ತೆಗೆಯುವುದು ಅಥವಾ ಹೋಳು ಮಾಡುವುದು ಮೊದಲಾದಂತಹ ಸಂರಕ್ಷಣೆಯ ಕಾರ್ಯವಿಧಾನವು ಮತ್ತು ಪ್ರಾಧಿಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಸಂಸ್ಕರಣೆಯ ಇತರ ಯಾವುದೇ ವಿಧಾನವು ಒಳಗೊಳ್ಳುತ್ತದೆ;

(ಹೆಚ್) "ವಿನಿಯಮಗಳು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳು;

(ಐ) "ಅನುಸೂಚಿತ ಉತ್ಪನ್ನ" ಎಂದರೆ, ಮೊದಲನೆಯ ಅನುಸೂಚಿಯಲ್ಲಿ ಸೇರಿಸಿರುವ ಕೃಷಿ ಅಥವಾ ಸಂಸ್ಕರಿತ ಆಹಾರ ಉತ್ಪನ್ನಗಳಲ್ಲಿ ಯಾವುದೇ ಉತ್ಪನ್ನ;

(ಜೆ) "ವಿಶೇಷ ಉತ್ಪನ್ನ" ಎಂದರೆ, ಎರಡನೇ ಅನುಸೂಚಿಯಲ್ಲಿ ಸೇರಿಸಿರುವ ಕೃಷಿ ಅಥವಾ ಸಂಸ್ಕರಿತ ಆಹಾರ ಉತ್ಪನ್ನಗಳಲ್ಲಿ ಯಾವುದೇ ಉತ್ಪನ್ನ.

3. **ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ.–** ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು, ಮತ್ತು ಯಾವುದೇ ಕೃಷಿ ಅಥವಾ ಸಂಸ್ಕರಿತ ಆಹಾರ ಉತ್ಪನ್ನವನ್ನು ಒಂದನೆಯ ಅನುಸೂಚಿಗೆ ಅಥವಾ ಎರಡನೆಯ ಅನುಸೂಚಿಗೆ ಸೇರಿಸುವುದು ಅಥವಾ ಸಂದರ್ಭಾನುಸಾರ ಒಂದನೆಯ ಅನುಸೂಚಿಯಿಂದ ಅಥವಾ ಎರಡನೆಯ ಅನುಸೂಚಿಯಿಂದ

ಬಿಟ್ಟುಬಿಡುವುದು ಅವಶ್ಯಕವೆಂದು ಅಥವಾ ವಿಹಿತವೆಂದು ಪರ್ಯಾಲೋಚಿಸಿದರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಹಾಗೆ ಸೇರಿಸಬಹುದು ಅಥವಾ ಸಂದರ್ಭಾನುಸಾರ ಬಿಟ್ಟುಬಿಡಬಹುದು ಮತ್ತು ಆ ತರುವಾಯ ಅಂಥ ಉತ್ಪನ್ನವು ಅನುಸೂಚಿತ ಅಥವಾ ಸಂದರ್ಭಾನುಸಾರ ವಿಶೇಷ ಉತ್ಪನ್ನವಾಗತಕ್ಕದ್ದು ಅಥವಾ ಅಂಥ ಉತ್ಪನ್ನವಾಗಿರುವುದು ಕೊನೆಗೊಳ್ಳತಕ್ಕದ್ದು.

## ಅಧ್ಯಾಯ II

## ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ

4. **ಪ್ರಾಧಿಕಾರದ ಸ್ಥಾಪನೆ ಮತ್ತು ರಚನೆ.**- (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, ಈ ಬಗ್ಗೆ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ಸ್ಥಾಪಿಸತಕ್ಕದ್ದು.

(2) ಪ್ರಾಧಿಕಾರವು ಮೇಲೆ ಹೇಳಿದ ಹೆಸರುಳ್ಳ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸಲು, ಧಾರಣ ಮಾಡಲು ಮತ್ತು ವಿಲೆ ಮಾಡಲು ಮತ್ತು ಕರಾರು ಮಾಡಿಕೊಳ್ಳಲು ಅಧಿಕಾರವನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಆ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಪ್ರಾಧಿಕಾರದ ಮುಖ್ಯ ಕಚೇರಿಯು ದೆಹಲಿಯಲ್ಲಿರತಕ್ಕದ್ದು ಮತ್ತು ಪ್ರಾಧಿಕಾರವು, ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು ಭಾರತದ ಒಳಗಿನ ಅಥವಾ ಹೊರಗಿನ ಇತರ ಸ್ಥಳಗಳಲ್ಲಿ ಕಚೇರಿಗಳನ್ನು ಮತ್ತು ಏಜೆನ್ಸಿಗಳನ್ನು ಸ್ಥಾಪಿಸಬಹುದು.

(4) ಪ್ರಾಧಿಕಾರದಲ್ಲಿ ಈ ಕೆಳಕಂಡ ಸದಸ್ಯರು ಇರತಕ್ಕದ್ದು, ಎಂದರೆ,-

(ಎ) ಕೇಂದ್ರ ಸರ್ಕಾರದಿಂದ ನೇಮಕಗೊಳ್ಳುವ ಅಧ್ಯಕ್ಷ;

(ಬಿ) ಭಾರತ ಸರ್ಕಾರದ ಕೃಷಿ ಮಾರುಕಟ್ಟೆ ಸಲಹೆಗಾರ, ಪದನಿಮಿತ್ತ;

(ಸಿ) ಯೋಜನಾ ಆಯೋಗವನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನೇಮಕ ಮಾಡುವ ಒಬ್ಬ ಸದಸ್ಯ;

(ಡಿ) ಸಂಸತ್ತಿನ ಮೂವರು ಸದಸ್ಯರು, ಅವರಲ್ಲಿ ಇಬ್ಬರನ್ನು ಲೋಕಸಭೆಯಿಂದ ಮತ್ತೊಬ್ಬರನ್ನು ರಾಜ್ಯ ಸಭೆಯಿಂದ ಆಯ್ಕೆ ಮಾಡತಕ್ಕದ್ದು;

(ಇ) ಅನುಕ್ರಮವಾಗಿ,-

(i) ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ;

(ii) ವಾಣಿಜ್ಯ;

(iii) ಹಣಕಾಸು;

(iv) ಕೈಗಾರಿಕೆ;

(v) ಆಹಾರ;

(vi) ನಾಗರಿಕ ಸರಬರಾಜು;

(vii) ನಾಗರಿಕ ವಿಮಾನಯಾನ;

(viii) ಹಡಗು ಸಾಗಣೆ ಮತ್ತು ಸಾರಿಗೆ;

– ಈ ಖಾತೆಗಳನ್ನು ನೋಡಿಕೊಳ್ಳುವ, ಕೇಂದ್ರ ಸರ್ಕಾರದ ಮಂತ್ರಾಲಯಗಳನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನೇಮಕ ಮಾಡುವಂಥ ಎಂಟು ಮಂದಿ ಸದಸ್ಯರು,-

(ಎಫ್) ರಾಜ್ಯಗಳನ್ನು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಪ್ರತಿನಿಧಿಸಲು ಅಕ್ಷರಾನುಕ್ರಮದಲ್ಲಿ ಸರದಿಯಂತೆ ಕೇಂದ್ರ ಸರ್ಕಾರವು ನೇಮಕಮಾಡುವಂಥ ಐವರು ಸದಸ್ಯರು:

ಪರಂತು, ಈ ಖಂಡದ ಮೇರೆಗೆ ಮಾಡುವ ನೇಮಕವನ್ನು ಸಂಬಂಧಪಟ್ಟ ರಾಜ್ಯ ಸರ್ಕಾರದ ಅಥವಾ ಸಂದರ್ಭಾನುಸಾರ, ಕೇಂದ್ರಾಡಳಿತ ಪ್ರದೇಶದ ಶಿಫಾರಸ್ಸಿನ ಮೇಲೆ ಮಾಡತಕ್ಕದ್ದು;

(ಜಿ) ಈ ಮುಂದಿನ ಸಂಸ್ಥೆಗಳನ್ನು ಎಂದರೆ,-

(i) ಭಾರತ ಕೃಷಿ ಸಂಶೋಧನಾ ಪರಿಷತ್ತು;

(ii) ರಾಷ್ಟ್ರೀಯ ತೋಟಗಾರಿಕಾ ಮಂಡಳಿ;

(iii) ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಒಕ್ಕೂಟ;

(iv) ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ;

(v) ಭಾರತ ಪ್ಯಾಕೇಜಿಂಗ್ ಸಂಸ್ಥೆ;

(vi) ಸಾಂಬಾರ ಪದಾರ್ಥಗಳ ರಫ್ತು ಸಂವರ್ಧನಾ ಪರಿಷತ್ತು; ಮತ್ತು

(vii) ಗೋಡಂಬಿ ರಫ್ತು ಸಂವರ್ಧನಾ ಪರಿಷತ್ತು

– ಈ ಸಂಸ್ಥೆಗಳನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನೇಮಕ ಮಾಡುವಂಥ ಏಳು ಮಂದಿ ಸದಸ್ಯರು,-

(ಹೆಚ್) ಈ ಮುಂದಿನ ಕೈಗಾರಿಕೆಗಳನ್ನು ಎಂದರೆ,-

(i) ಹಣ್ಣು ಮತ್ತು ತರಕಾರಿ ಉತ್ಪನ್ನಗಳ ಕೈಗಾರಿಕೆಗಳು;

(ii) ಮಾಂಸ, ಕೋಳಿ ಸಾಕಣೆ ಮತ್ತು ಹೈನು ಉತ್ಪನ್ನಗಳ ಕೈಗಾರಿಕೆಗಳು;

(iii) ಇತರ ಅನುಸೂಚಿತ ಉತ್ಪನ್ನಗಳ ಅಥವಾ ವಿಶೇಷ ಉತ್ಪನ್ನಗಳ ಕೈಗಾರಿಕೆಗಳು:

(iv) ಪ್ಯಾಕೇಜಿಂಗ್ ಕೈಗಾರಿಕೆ

– ಈ ಕೈಗಾರಿಕೆಗಳನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನೇಮಕ ಮಾಡುವಂಥ ಹನ್ನೆರಡು ಮಂದಿ ಸದಸ್ಯರು:

ಪರಂತು, (i)ರಿಂದ (iii)ರವರೆಗಿನ ಉಪಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ಕೈಗಾರಿಕೆಗಳ ಸಮೂಹಗಳಲ್ಲಿ ಯಾವುದೇ ಸಮೂಹವನ್ನು ಅಥವಾ (iv)ನೇ ಉಪಖಂಡದಲ್ಲಿ ನಿರ್ದಿಷ್ಟಪಡಿಸಿರುವ ಕೈಗಾರಿಕೆಯನ್ನು ಪ್ರತಿನಿಧಿಸಲು ನೇಮಕಗೊಂಡ ಸದಸ್ಯರ ಸಂಖ್ಯೆಯು ಯಾವುದೇ ಕಾರಣದಿಂದಲೂ ಎರಡಕ್ಕಿಂತ ಕಡಿಮೆ ಇರತಕ್ಕದ್ದಲ್ಲ;

(ಐ) ಕೃಷಿ, ಅರ್ಥಶಾಸ್ತ್ರ ಮತ್ತು ಅನುಸೂಚಿತ ಉತ್ಪನ್ನಗಳ ಕ್ರಯವಿಕ್ರಯ, ಕ್ಷೇತ್ರಗಳಲ್ಲಿನ ತಜ್ಞರು ಮತ್ತು ವಿಜ್ಞಾನಿಗಳ ಪೈಕಿಯಿಂದ ಕೇಂದ್ರ ಸರ್ಕಾರವು, ನೇಮಕ ಮಾಡುವಂಥ ಇಬ್ಬರು ಸದಸ್ಯರು.

(5) ಉಪಪ್ರಕರಣ (4)ರ (ಬಿ) ಖಂಡದಲ್ಲಿ ತಿಳಿಸಿರುವ ಸದಸ್ಯರನ್ನು ಹೊರತುಪಡಿಸಿ ಉಳಿದ ಸದಸ್ಯರ ಪದಾವಧಿಯು ಮತ್ತು ಸದಸ್ಯರ ಸ್ಥಾನಗಳಲ್ಲಿ ತೆರವಾಗುವ ಸ್ಥಾನಗಳನ್ನು ಭರ್ತಿಮಾಡುವ ರೀತಿಯು, ಮತ್ತು ಸದಸ್ಯರು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅನುಸರಿಸಬೇಕಾದ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

(6) ಪ್ರಾಧಿಕಾರದ ಸದಸ್ಯನಾಗಿರದ, ಕೇಂದ್ರ ಸರ್ಕಾರದ ಯಾರೇ ಅಧಿಕಾರಿಯನ್ನು, ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಪ್ರತಿನಿಯೋಜಿಸಿದಾಗ, ಆ ಅಧಿಕಾರಿಯು ಪ್ರಾಧಿಕಾರದ ಸಭೆಗಳಿಗೆ ಹಾಜರಾಗಲು ಮತ್ತು ಅದರ ವ್ಯವಹರಣೆಗಳಲ್ಲಿ ಭಾಗವಹಿಸಲು ಹಕ್ಕನ್ನು ಹೊಂದಿರತಕ್ಕದ್ದು, ಆದರೆ ಮತ ಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(7) ಪ್ರಾಧಿಕಾರದ ಅಥವಾ 9ನೇ ಪ್ರಕರಣದ ಮೇರೆಗೆ ನೇಮಕಗೊಂಡ ಅದರ ಯಾವುದೇ ಸಮಿತಿಯ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು,-

(ಎ) ಪ್ರಾಧಿಕಾರದಲ್ಲಿ ಅಥವಾ ಅಂಥ ಸಮಿತಿಯಲ್ಲಿ ಯಾವುದೇ ಸ್ಥಾನ ಖಾಲಿ ಇರುವ ಅಥವಾ ಪ್ರಾಧಿಕಾರದ ಅಥವಾ ಸಮಿತಿಯ ರಚನೆಯಲ್ಲಿ ಯಾವುದೇ ದೋಷ ಇರುವ; ಅಥವಾ

(ಬಿ) ಪ್ರಾಧಿಕಾರದ ಅಥವಾ ಅಂಥ ಸಮಿತಿಯ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ನೇಮಕದಲ್ಲಿ ಯಾವುದೇ ದೋಷ ಇರುವ; ಅಥವಾ

(ಸಿ) ಪ್ರಾಧಿಕಾರದ ಅಥವಾ ಅಂಥ ಸಮಿತಿಯ ಕಾರ್ಯವಿಧಾನದಲ್ಲಿ ಪ್ರಕರಣದ ಗುಣಾವಗುಣಗಳಿಗೆ ಬಾಧಕ ಉಂಟು ಮಾಡದಂಥ ಯಾವುದೇ ಅಕ್ರಮತೆ ಇರುವ

- ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

(8) ಪ್ರಾಧಿಕಾರವು, ವಿನಿಯಮಗಳಲ್ಲಿ ಉಪಬಂಧಿಸಬಹುದಾದಂಥ ಕಾಲಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ (ಅದರ ಸಭೆಗಳಲ್ಲಿ ಇರಬೇಕಾದ ಕೋರಂ ಸೇರಿದಂತೆ) ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂಥ ಕಾರ್ಯವಿಧಾನ ನಿಯಮಗಳನ್ನು ಪಾಲಿಸತಕ್ಕದ್ದು.

**5. ಅಧ್ಯಕ್ಷನ ಸಂಬಳ ಮತ್ತು ಭತ್ಯೆಗಳು ಮತ್ತು ಸೇವೆಯ ಇತರ ಷರತ್ತುಗಳು ಮತ್ತು ಸದಸ್ಯರ ಭತ್ಯೆಗಳು.**- (1) ಅಧ್ಯಕ್ಷನು, ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ಸಂಬಳ ಮತ್ತು ಭತ್ಯೆಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು ಮತ್ತು ರಜೆ, ನಿವೃತ್ತಿ ವೇತನ, ಭವಿಷ್ಯ ನಿಧಿ ಮತ್ತು ಇತರ ವಿಷಯಗಳ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನಿಯಮಿಸಬಹುದಾದಂಥ ಸೇವೆಯ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

(2) ಪ್ರಾಧಿಕಾರದ ಇತರ ಸದಸ್ಯರು, ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದಂಥ ಭತ್ಯೆಗಳನ್ನು ಪಡೆಯತಕ್ಕದ್ದು.

(3) ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ, ಸದಸ್ಯನು ಕೇಂದ್ರ ಸರ್ಕಾರಕ್ಕೆ ಲಿಖಿತ ನೋಟೀಸನ್ನು ನೀಡಿ ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು ಮತ್ತು ರಾಜೀನಾಮೆಯನ್ನು ಅಂಗೀಕರಿಸಿದ ಮೇಲೆ, ಅವನು ತನ್ನ ಪದವನ್ನು ತೆರವು ಮಾಡಿರುವನೆಂದು ಭಾವಿಸತಕ್ಕದ್ದು.

**6. ಅಧ್ಯಕ್ಷನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುವುದು.**- ಅಧ್ಯಕ್ಷನು, ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರತಕ್ಕದ್ದು ಮತ್ತು ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**7. ಪ್ರಾಧಿಕಾರದ ಕಾರ್ಯದರ್ಶಿ ಮತ್ತು ಇತರ ಸಿಬ್ಬಂದಿ.**- (1) ಕೇಂದ್ರ ಸರ್ಕಾರವು ಪ್ರಾಧಿಕಾರಕ್ಕೆ ಒಬ್ಬ ಕಾರ್ಯದರ್ಶಿಯನ್ನು ನೇಮಕ ಮಾಡತಕ್ಕದ್ದು ಮತ್ತು ಅವನು, ನಿಯಮಿಸಬಹುದಾದಂಥ ಅಥವಾ ಅಧ್ಯಕ್ಷನು ಅವನಿಗೆ ವಹಿಸಿಕೊಡಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(2) ಕಾರ್ಯದರ್ಶಿಯು, ಕೇಂದ್ರ ಸರ್ಕಾರವು, ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ಸಂಬಳ ಮತ್ತು ಭತ್ಯೆಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು ಮತ್ತು ರಜೆ, ನಿವೃತ್ತಿ ವೇತನ, ಭವಿಷ್ಯನಿಧಿ ಮತ್ತು ಇತರ ವಿಷಯಗಳ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಸೇವೆಯ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

(3) ಪ್ರಾಧಿಕಾರವು ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಗೆ ಅವಶ್ಯಕವಾಗಬಹುದಾದಂಥ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ನಿಯಮಿಸಬಹುದಾದಂಥ ನಿಯಂತ್ರಣಕ್ಕೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ನೇಮಕ ಮಾಡಿಕೊಳ್ಳಬಹುದು ಮತ್ತು ಪ್ರಾಧಿಕಾರದ ಅಂಥ ಇತರ

ಅಧಿಕಾರಿಗಳ ಮತ್ತು ನೌಕರರ ನೇಮಕದ ವಿಧಾನ, ವೇತನ ಶ್ರೇಣಿ ಮತ್ತು ಭತ್ಯೆಗಳು ಮತ್ತು ಸೇವೆಯ ಇತರ ಷರತ್ತುಗಳು ಪ್ರಾಧಿಕಾರವು ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂತೆ ಇರತಕ್ಕದ್ದು.

(4) ಪ್ರಾಧಿಕಾರದ ಅಧ್ಯಕ್ಷನು, ಕಾರ್ಯದರ್ಶಿಯು ಮತ್ತು ಇತರ ಅಧಿಕಾರಿಗಳು ಹಾಗೂ ನೌಕರರು ಕೇಂದ್ರ ಸರ್ಕಾರದ ಅನುಮತಿ ಪಡೆದ ಹೊರತು, ಈ ಅಧಿನಿಯಮದ ಮೇರೆಗಿನ ತಮ್ಮ ಕರ್ತವ್ಯಗಳಿಗೆ ಸಂಬಂಧಿಸಿರದ ಯಾವುದೇ ಕಾರ್ಯವನ್ನು ಕೈಗೊಳ್ಳತಕ್ಕದ್ದಲ್ಲ.

8. **ಪ್ರಾಧಿಕಾರಕ್ಕೆ ನೌಕರರನ್ನು ವರ್ಗಾವಣೆ ಮಾಡುವುದಕ್ಕೆ ವಿಶೇಷ ಉಪಬಂಧ.**- (1) ಪ್ರಾಧಿಕಾರವನ್ನು ಸ್ಥಾಪಿಸಿದ ತರುವಾಯ, ಕೇಂದ್ರ ಸರ್ಕಾರವು, ಪ್ರಾಧಿಕಾರವನ್ನು ಸ್ಥಾಪಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ, ಸಂಸ್ಕರಿತ ಆಹಾರಗಳ ರಫ್ತು ಸಂವರ್ಧನಾ ಪರಿಷತ್ತಿನಲ್ಲಿ (ಈ ಪ್ರಕರಣದಲ್ಲಿ ಇನ್ನು ಮುಂದೆ ಪರಿಷತ್ತು ಎಂಬುದಾಗಿ ಉಲ್ಲೇಖಿತವಾಗಿದೆ) ಅಧಿಕಾರಿಯಾಗಿ ಪದಧಾರಣ ಮಾಡಿದ್ದಂಥ ಯಾರೇ ಅಧಿಕಾರಿಯನ್ನು, ಅಥವಾ ನೌಕರನಾಗಿ ಪದಧಾರಣ ಮಾಡಿದಂಥ ಯಾರೇ ಇತರ ನೌಕರನನ್ನು ಆದೇಶದ ಮೂಲಕ ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಅಥವಾ ದಿನಾಂಕಗಳಿಂದ ಜಾರಿಗೆ ಬರುವಂತೆ ಅಂಥ ಅಧಿಕಾರಿಯಾಗಿ ಅಥವಾ ಇತರ ನೌಕರನಾಗಿ ಪ್ರಾಧಿಕಾರಕ್ಕೆ ವರ್ಗಾಯಿಸುವುದು ಕಾನೂನುಬದ್ಧವಾದುದಾಗಿರತಕ್ಕದ್ದು:

ಪರಂತು, ಅಂಥ ಅಧಿಕಾರಿಯನ್ನು ಅಥವಾ ಇತರ ನೌಕರನನ್ನು ಪ್ರಾಧಿಕಾರದಲ್ಲಿನ ಯಾವ ಹುದ್ದೆಗೆ ವರ್ಗಾಯಿಸಲಾಯಿತೋ ಆ ಹುದ್ದೆಯ ವೇತನ ಶ್ರೇಣಿಯು ಅಂಥ ವರ್ಗಾವಣೆಗೆ ನಿಕಟಪೂರ್ವದಲ್ಲಿ ಅವನು ಧಾರಣ ಮಾಡಿದಂಥ ಹುದ್ದೆಯ ವೇತನ ಶ್ರೇಣಿಗಿಂತ ಕಡಿಮೆಯಾಗಿರತಕ್ಕದ್ದಲ್ಲ ಮತ್ತು ಅವನು ಯಾವ ಹುದ್ದೆಗೆ ವರ್ಗಾವಣೆ ಹೊಂದಿದನೋ ಆ ಹುದ್ದೆಯ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು (ನಿವೃತ್ತಿ ವೇತನ, ರಜೆ, ಭವಿಷ್ಯ ನಿಧಿ ಮತ್ತು ವೈದ್ಯಕೀಯ ಸೌಲಭ್ಯಗಳು ಒಳಗೊಂಡಂತೆ) ಅಂಥ ವರ್ಗಾವಣೆಗೆ ನಿಕಟಪೂರ್ವದಲ್ಲಿ ಅವನು ಹೊಂದಿದ್ದ ಹುದ್ದೆಗೆ ಇದ್ದಂಥ ಸೇವೆಯ ನಿಬಂಧನೆಗಳಿಗಿಂತ ಮತ್ತು ಷರತ್ತುಗಳಿಗಿಂತ ಕಡಿಮೆ ಅನುಕೂಲಕರವಾದವುಗಳು ಆಗಿರತಕ್ಕದ್ದಲ್ಲ.

(2) ಉಪಪ್ರಕರಣ (1)ರ ಮೇರೆಗಿನ ಆದೇಶವನ್ನು, ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕಿಂತ ಮುಂಚಿನದಲ್ಲದ ದಿನಾಂಕದಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವ ಹಾಗೆ ಮಾಡಬಹುದು.

(3) ಉಪಪ್ರಕರಣ (1)ರ ಮೇರೆಗೆ ಯಾವುದೇ ಆದೇಶವನ್ನು ಹೊರಡಿಸುವುದಕ್ಕೆ ಮೊದಲು, ಪರಿಷತ್ತಿನ ಎಲ್ಲ ಅಧಿಕಾರಿಗಳಿಗೆ ಮತ್ತು ನೌಕರರಿಗೆ, ಪ್ರಾಧಿಕಾರದ ನೌಕರರಾಗುವುದಕ್ಕೆ ಅವರಿಗೆ ಒಪ್ಪಿಗೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಕೇಂದ್ರ ಸರ್ಕಾರವು ಆ ಬಗ್ಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ, ಮತ್ತು ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ, ತಿಳಿಸಲು ಅವಕಾಶವನ್ನು ನೀಡತಕ್ಕದ್ದು ಮತ್ತು ಅಂಥ ಆಯ್ಕೆಯ ಅವಕಾಶವನ್ನು ಒಮ್ಮೆ ಚಲಾಯಿಸಿದರೆ ಅದು ಅಂತಿಮವಾದುದಾಗಿರತಕ್ಕದ್ದು:

ಪರಂತು, ಪ್ರಾಧಿಕಾರದ ನೌಕರನಾಗಲು ತನಗೆ ಇಚ್ಛೆ ಇಲ್ಲ ಎಂಬುದನ್ನು ಆ ಬಗ್ಗೆ ನಿರ್ದಿಷ್ಟಪಡಿಸಿದ ಕಾಲದೊಳಗೆ ಪರಿಷತ್ತಿನ ಯಾವ ಅಧಿಕಾರಿಯು ಅಥವಾ ನೌಕರನು ತಿಳಿಸುವನೋ ಆ ಯಾರೇ ಅಧಿಕಾರಿಯ ಅಥವಾ ಇತರ ನೌಕರನ ಸಂಬಂಧದಲ್ಲಿ ಉಪಪ್ರಕರಣ (1)ರ ಮೇರೆಗಿನ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ:

ಮತ್ತೂ ಪರಂತು, ಪ್ರಾಧಿಕಾರದ ನೌಕರರಾಗುವುದಕ್ಕೆ ತಮಗೆ ಇಚ್ಛೆ ಇರುವುದನ್ನು ತಿಳಿಸಲು ನಿರ್ದಿಷ್ಟಪಡಿಸಿದ ಕಾಲದೊಳಗಾಗಿ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸದಿರುವಂಥ ಪರಿಷತ್ತಿನ ಅಧಿಕಾರಿಗಳ ಮತ್ತು ನೌಕರರ ಬಗ್ಗೆ, ಪರಿಷತ್ತಿನ ಅಧಿಕಾರಿಗಳ ಮತ್ತು ನೌಕರರ ಸಂಖ್ಯಾ ಬಲವನ್ನು ಕಡಿತಗೊಳಿಸುವ ಸಂದರ್ಭದಲ್ಲಿ ಪರಿಷತ್ತಿನ ನೌಕರರಿಗೆ ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಅನ್ವಯಿಸುತ್ತಿದ್ದಂಥ ರೀತಿಯಲ್ಲಿಯೇ ಮತ್ತು ಅನ್ವಯಿಸುತ್ತಿದ್ದಂಥವೇ ಕಾನೂನುಗಳಿಗೆ ಮತ್ತು ಸ್ಥಾಯೀ ಆದೇಶಗಳಿಗನುಸಾರವಾಗಿಯೇ ಕ್ರಮಜರುಗಿಸತಕ್ಕದ್ದು.

(4) ಉಪಪ್ರಕರಣ (1)ರ ಮೇರೆಗೆ ಮಾಡಿದ ಆದೇಶದ ಮೂಲಕ ವರ್ಗಾವಣೆಯಾದ ಅಧಿಕಾರಿಯು ಅಥವಾ ಇತರ ನೌಕರನು, ವರ್ಗಾವಣೆಯ ದಿನಾಂಕದಂದು ಮತ್ತು ದಿನಾಂಕದಿಂದ, ಪರಿಷತ್ತಿನ ನೌಕರನಾಗಿರುವುದು ನಿಂತುಹೋಗತಕ್ಕದ್ದು ಮತ್ತು ಅವನು ಪ್ರಾಧಿಕಾರದಲ್ಲಿ, ಪ್ರಾಧಿಕಾರವು ನಿರ್ಧರಿಸಬಹುದಾದಂಥ ಪದನಾಮದ ಅಧಿಕಾರಿ ಅಥವಾ ನೌಕರನಾಗಿರತಕ್ಕದ್ದು ಮತ್ತು (1)ನೇ ಉಪಪ್ರಕರಣದ ಪರಂತುಕದ ಉಪಬಂಧಗಳಿಗೊಳಪಟ್ಟು, ವೇತನದ ಮತ್ತು ಸೇವೆಯ ಇತರ ಷರತ್ತುಗಳ (ನಿವೃತ್ತಿ ವೇತನ, ರಜೆ, ಭವಿಷ್ಯ ನಿಧಿ ಮತ್ತು ವೈದ್ಯಕೀಯ ಸೌಲಭ್ಯಗಳೂ ಸೇರಿದಂತೆ) ಸಂಬಂಧದಲ್ಲಿ ಅವನಿಗೆ ಈ ಅಧಿನಿಯಮದ ಮೇರೆಗೆ ಪ್ರಾಧಿಕಾರವು ರಚಿಸಿದ ವಿನಿಯಮಗಳು ಅನ್ವಯಿಸತಕ್ಕದ್ದು ಮತ್ತು ಪ್ರಾಧಿಕಾರವು ಅವನ ನೇಮಕವನ್ನು ಕ್ರಮಬದ್ಧವಾಗಿ ಕೊನೆಗೊಳಿಸಿದ ಹೊರತು ಮತ್ತು ಕೊನೆಗೊಳಿಸುವವರೆಗೆ ಅವನು ಪ್ರಾಧಿಕಾರದ ಅಧಿಕಾರಿಯಾಗಿರುವುದು ಅಥವಾ ನೌಕರನಾಗಿರುವುದು ಮುಂದುವರಿಯತಕ್ಕದ್ದು:

ಪರಂತು, ಮೇಲೆ ಹೇಳಿದಂತೆ ಪ್ರಾಧಿಕಾರದ ಅಧಿಕಾರಿಗಳ ಮತ್ತು ಇತರ ನೌಕರರ ಸೇವೆಯ ಷರತ್ತುಗಳಿಗೆ ಅನ್ವಯಿಸುವಂಥ ವಿನಿಯಮಗಳನ್ನು, ಪ್ರಾಧಿಕಾರವು ರಚಿಸುವ ಕಾಲದವರೆಗೆ, ಪರಿಷತ್ತಿನ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಅನ್ವಯವಾಗುವಂಥ ಸಂಬಂಧಪಟ್ಟ ಕಾನೂನುಗಳು ಮತ್ತು ಸ್ಥಾಯೀ ಆದೇಶಗಳು ಅವರಿಗೆ ಅನ್ವಯವಾಗುವುದು ಮುಂದುವರೆಯತಕ್ಕದ್ದು.

(5) ವೇತನ, ನಿವೃತ್ತಿ ವೇತನ, ರಜೆ, ಭವಿಷ್ಯ ನಿಧಿ ಮತ್ತು ವೈದ್ಯಕೀಯ ಸೌಲಭ್ಯಗಳೂ ಸೇರಿದಂತೆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರವು ರಚಿಸಿದ ವಿನಿಯಮಗಳಲ್ಲಿ ನಿಯಮಿಸಿರುವಂಥ ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು ಅಧಿಕಾರಿಯನ್ನು ಅಥವಾ ಇತರ ನೌಕರನನ್ನು ಪ್ರಾಧಿಕಾರಕ್ಕೆ ವರ್ಗಾವಣೆ ಮಾಡುವುದಕ್ಕೆ ನಿಕಟ ಪೂರ್ವದಲ್ಲಿ ಅವನು ಧಾರಣ ಮಾಡಿದ್ದಂಥ ಹುದ್ದೆಗೆ ಅನ್ವಯಿಸುತ್ತಿದ್ದಂಥ ನಿಬಂಧನೆಗಳಿಗಿಂತ ಮತ್ತು ಷರತ್ತುಗಳಿಗಿಂತ ಕಡಿಮೆ ಅನುಕೂಲಕರವಾದವುಗಳಾಗಿವೆಯೇ ಹೇಗೆ ಎಂಬ ಪ್ರಶ್ನೆ ಉದ್ಭವಿಸಿದರೆ, ಈ ವಿಷಯದಲ್ಲಿ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

9. **ಪ್ರಾಧಿಕಾರದ ಸಮಿತಿಗಳು.-** (1) ಪ್ರಾಧಿಕಾರವು, ಈ ಅಧಿನಿಯಮದ ಮೇರೆಗೆ ತನ್ನ ಕರ್ತವ್ಯಗಳನ್ನು ದಕ್ಷತೆಯಿಂದ ನಿರ್ವಹಿಸಲು ಮತ್ತು ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ಅವಶ್ಯವೆನಿಸಬಹುದಾದಂಥ ಸಮಿತಿಗಳನ್ನು ನೇಮಕ ಮಾಡಬಹುದು.

(2) ಪ್ರಾಧಿಕಾರವು, ಸೂಕ್ತವೆಂದು ತಾನು ಭಾವಿಸಬಹುದಾದಷ್ಟು ಸಂಖ್ಯೆಯ ಪ್ರಾಧಿಕಾರದ ಸದಸ್ಯರಲ್ಲದ ವ್ಯಕ್ತಿಗಳನ್ನು, (1)ನೇ ಉಪಪ್ರಕರಣದ ಮೇರೆಗೆ ನೇಮಕ ಮಾಡಿದ ಯಾವುದೇ ಸಮಿತಿಯ ಸಹ ಸದಸ್ಯರನ್ನಾಗಿ ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಹಾಗೇ ಸಹ ಸದಸ್ಯರಾಗಿ ಆಯ್ಕೆಯಾದ ವ್ಯಕ್ತಿಗಳು ಸಮಿತಿಯ ಸಭೆಗಳಿಗೆ ಹಾಜರಾಗಲು ಮತ್ತು ಸಮಿತಿಯ ವ್ಯವಹರಣೆಗಳಲ್ಲಿ ಭಾಗವಹಿಸಲು ಹಕ್ಕನ್ನು ಹೊಂದಿರತಕ್ಕದ್ದು. ಆದರೆ ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(3) ಉಪಪ್ರಕರಣ (2)ರ ಮೇರೆಗೆ ಸಮಿತಿಯ ಸಹ ಸದಸ್ಯರಾಗಿ ಆಯ್ಕೆಗೊಂಡ ವ್ಯಕ್ತಿಗಳು ಸಮಿತಿಯ ಸಭೆಗಳಿಗೆ ಹಾಜರಾದುದಕ್ಕಾಗಿ ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದಂಥ ಭತ್ಯೆಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

10. **ಪ್ರಾಧಿಕಾರದ ಪ್ರಕಾರ್ಯಗಳು.-** (1) ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿ, ಅನುಸೂಚಿತ ಉತ್ಪನ್ನಗಳ ರಫ್ತನ್ನು ಅಭಿವೃದ್ಧಿಗೊಳಿಸಲು ಮತ್ತು ಆ ಉತ್ಪನ್ನಗಳ ರಫ್ತಿಗೆ ಉತ್ತೇಜನ ನೀಡಲು

ಸೂಕ್ತವೆಂದು ತಾನು ಭಾವಿಸಬಹುದಾದಂಥ ಕ್ರಮಗಳನ್ನು ಕೈಗೊಳ್ಳುವುದು ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

(2) ಉಪಪ್ರಕರಣ (1)ರ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅದರಲ್ಲಿ ತಿಳಿಸಿರುವ ಕ್ರಮಗಳು,-

(ಎ) ಸಮೀಕ್ಷೆಗಳನ್ನು ಮತ್ತು ಕಾರ್ಯಸಾಧ್ಯತಾ ಅಧ್ಯಯನಗಳನ್ನು ಕೈಗೊಳ್ಳುವುದಕ್ಕಾಗಿ, ಜಂಟಿ ಉದ್ಯಮಗಳ ಮೂಲಕ ಈಕ್ವಿಟಿ ಬಂಡವಾಳದಲ್ಲಿ ಪಾಲ್ಗೊಳ್ಳುವುದಕ್ಕಾಗಿ ಹಣಕಾಸು ನೆರವನ್ನು ಅಥವಾ ಇತರ ಬಗೆಯ ನೆರವನ್ನು ಒದಗಿಸುವ ಮೂಲಕ ಮತ್ತು ಇತರ ಪರಿಹಾರಗಳನ್ನು ಮತ್ತು ಸಬ್ಸಿಡಿ ಯೋಜನೆಗಳನ್ನು ಒದಗಿಸುವ ಮೂಲಕ, ರಫ್ತು ಮಾಡುವಂಥ ಅನುಸೂಚಿತ ಉತ್ಪನ್ನಗಳಿಗೆ ಸಂಬಂಧಿಸಿದ ಕೈಗಾರಿಕೆಗಳ ಅಭಿವೃದ್ಧಿಗಾಗಿ;

(ಬಿ) ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಅನುಸೂಚಿತ ಉತ್ಪನ್ನಗಳ ರಫ್ತುದಾರರನ್ನಾಗಿ ವ್ಯಕ್ತಿಗಳನ್ನು ನೋಂದಾಯಿಸುವುದಕ್ಕಾಗಿ;

(ಸಿ) ರಫ್ತು ಮಾಡುವ ಉದ್ದೇಶಗಳಿಗಾಗಿ ಅನುಸೂಚಿತ ಉತ್ಪನ್ನಗಳ ಗುಣಮಟ್ಟಗಳನ್ನು ಮತ್ತು ವಿಶಿಷ್ಟ ವಿವರಣೆಗಳನ್ನು ನಿಗದಿಪಡಿಸುವುದಕ್ಕಾಗಿ;

(ಡಿ) ಮಾಂಸವನ್ನು ಮತ್ತು ಮಾಂಸದ ಉತ್ಪನ್ನಗಳನ್ನು ಯಾವುದೇ ಕಸಾಯಿಖಾನೆಯಲ್ಲಿ, ಸಂಸ್ಕರಣಾ ಸ್ಥಾವರದಲ್ಲಿ, ದಾಸ್ತಾನು ಸ್ಥಳಗಳಲ್ಲಿ, ಸಾಗಣೆ ವಾಹನಗಳಲ್ಲಿ ಅಥವಾ ಯಾವ ಸ್ಥಳಗಳಲ್ಲಿ ಅಂಥ ಉತ್ಪನ್ನಗಳನ್ನು ಇಡಲಾಗಿದೆಯೋ ಅಥವಾ ಅಂಥ ಉತ್ಪನ್ನಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಅವುಗಳ ಬಗ್ಗೆ ನಿಗಾ ಇಡಲಾಗಿದೆಯೋ ಆ ಇತರ ಸ್ಥಳಗಳಲ್ಲಿ ತಪಾಸಣೆ ಮಾಡುವುದಕ್ಕಾಗಿ;

(ಇ) ಅನುಸೂಚಿತ ಉತ್ಪನ್ನಗಳ ಪ್ಯಾಕೇಜಿಂಗನ್ನು ಉತ್ತಮಪಡಿಸುವುದಕ್ಕಾಗಿ;

(ಎಫ್) ಭಾರತದ ಹೊರಗೆ ಅನುಸೂಚಿತ ಉತ್ಪನ್ನಗಳ ಮಾರುಕಟ್ಟೆಯನ್ನು ಸುಧಾರಣೆ ಮಾಡುವುದಕ್ಕಾಗಿ;

(ಜಿ) ರಫ್ತು ಆಧಾರಿತ ಉತ್ಪಾದನೆಗೆ ಉತ್ತೇಜನ ನೀಡುವುದಕ್ಕಾಗಿ ಮತ್ತು ಅನುಸೂಚಿತ ಉತ್ಪನ್ನಗಳನ್ನು ವೃದ್ಧಿಸುವುದಕ್ಕಾಗಿ;

(ಹೆಚ್) ಅನುಸೂಚಿತ ಉತ್ಪನ್ನಗಳ ಉತ್ಪಾದನೆಯಲ್ಲಿ, ಸಂಸ್ಕರಣೆಯಲ್ಲಿ, ಪ್ಯಾಕೇಜಿಂಗ್‌ನಲ್ಲಿ, ಕ್ರಯವಿಕ್ರಯದಲ್ಲಿ ಅಥವಾ ರಫ್ತು ಮಾಡುವುದರಲ್ಲಿ ತೊಡಗಿರುವ ಕಾರ್ಖಾನೆಗಳ ಅಥವಾ ಕಾರ್ಯಸಂಸ್ಥೆಗಳ ಮಾಲೀಕರಿಂದ ಅಥವಾ ಅನುಸೂಚಿತ ಉತ್ಪನ್ನಗಳಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ನಿಯಮಿಸಬಹುದಾದಂಥ ಇತರ ವ್ಯಕ್ತಿಗಳಿಂದ ಅಂಕಿಅಂಶಗಳನ್ನು ಸಂಗ್ರಹಿಸುವುದಕ್ಕಾಗಿ; ಮತ್ತು ಹಾಗೆ ಸಂಗ್ರಹಿಸಿದ ಅಂಕಿಅಂಶಗಳನ್ನು, ಅಥವಾ ಅವುಗಳ ಯಾವುದೇ ಭಾಗಗಳನ್ನು ಅಥವಾ ಅವುಗಳಿಂದ ತೆಗೆದುಕೊಂಡ ಉಧೃತ ಭಾಗಗಳನ್ನು ಪ್ರಕಟಿಸುವುದಕ್ಕಾಗಿ;

(ಐ) ಅನುಸೂಚಿತ ಉತ್ಪನ್ನಗಳಿಗೆ ಸಂಬಂಧಪಟ್ಟ ಕೈಗಾರಿಕೆಗಳ ವಿವಿಧ ಅಂಶಗಳ ಬಗ್ಗೆ ತರಬೇತಿ ನೀಡುವುದಕ್ಕಾಗಿ;

(ಜೆ) ನಿಯಮಿಸಬಹುದಾದಂಥ ಇತರ ವಿಷಯಗಳಿಗಾಗಿ

– ಅವಕಾಶ ಕಲ್ಪಿಸಬಹುದು.

**10ಎ. ವಿಶೇಷ ಉತ್ಪನ್ನಗಳಿಗೆ ಸಂಬಂಧಿಸಿದ ಪ್ರಕಾರ್ಯಗಳು, ಇತ್ಯಾದಿ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಬಾಧಕವಾಗದಂತೆ, ಭಾರತದಲ್ಲಿ ಅಥವಾ ಭಾರತದ ಹೊರಗೆ, ವಿಶೇಷ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಬೌದ್ಧಿಕ ಸ್ವತ್ತಿನ ಹಕ್ಕುಗಳ ನೋಂದಣಿಗಾಗಿ ಮತ್ತು ರಕ್ಷಣೆಗಾಗಿ ಕೇಂದ್ರ ಸರ್ಕಾರವು ನಿಯಮಿಸಬಹುದಾದಂತಹ ಕ್ರಮಗಳನ್ನು ಕೈಗೊಳ್ಳುವುದು ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

**ವಿವರಣೆ:** ಈ ಪ್ರಕರಣದ ಉದ್ದೇಶಕ್ಕಾಗಿ, "ಬೌದ್ಧಿಕ ಸ್ವತ್ತು" ಎಂದರೆ, ಅಮೂರ್ತ ಸ್ವತ್ತಿಗೆ ಎಂದರೆ, ವ್ಯಾಪಾರ ಚಿಹ್ನೆಗಳಿಗೆ, ವಿನ್ಯಾಸಗಳಿಗೆ, ಪೇಟೆಂಟುಗಳಿಗೆ, ಭೌಗೋಳಿಕ ಸಂಕೇತಗಳಿಗೆ ಅಥವಾ ಅದೇ ರೀತಿಯ ಯಾವುದೇ ಇತರ ಅಮೂರ್ತ ಸ್ವತ್ತಿಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಇರುವ ಹಕ್ಕು.

**11. ಪ್ರಾಧಿಕಾರವನ್ನು ರದ್ದುಪಡಿಸಲು ಅಧಿಕಾರ.–** (1) ಪ್ರಾಧಿಕಾರವು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ, ತನಗೆ ವಹಿಸಿರುವ ಕರ್ತವ್ಯವನ್ನು ನಿರ್ವಹಿಸಲು ಅಸಮರ್ಥವಾಗಿದೆ ಎಂದು ಅಥವಾ ಆ ಕರ್ತವ್ಯದ ನಿರ್ವಹಣೆಯಲ್ಲಿ ಪದೇ ಪದೇ ತಪ್ಪು ಮಾಡಿದೆ ಎಂದು ಅಥವಾ ತನ್ನ ಅಧಿಕಾರಗಳನ್ನು ಮೀರಿ ನಡೆದುಕೊಂಡಿದೆ ಎಂದು ಅಥವಾ ಆ ಅಧಿಕಾರಗಳನ್ನು ದುರುಪಯೋಗಪಡಿಸಿಕೊಂಡಿದೆ ಎಂದು ಅಥವಾ 20ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು

ನಿರ್ದೇಶನವನ್ನು ಪಾಲಿಸಲು ಉದ್ದೇಶಪೂರ್ವಕವಾಗಿ ಅಥವಾ ಸಾಕಷ್ಟು ಕಾರಣವಿಲ್ಲದೆ ತಪ್ಪಿದೆ ಎಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಪ್ರಾಧಿಕಾರವನ್ನು ರದ್ದುಪಡಿಸಬಹುದು:

ಪರಂತು, ಈ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ, ಕೇಂದ್ರ ಸರ್ಕಾರವು, ಪ್ರಾಧಿಕಾರವನ್ನು ಏಕೆ ರದ್ದುಪಡಿಸಬಾರದು ಎಂಬುದಕ್ಕೆ ಕಾರಣವನ್ನು ತೋರಿಸಲು ಪ್ರಾಧಿಕಾರಕ್ಕೆ ಯುಕ್ತ ಅವಕಾಶವನ್ನು ನೀಡತಕ್ಕದ್ದು ಮತ್ತು ಪ್ರಾಧಿಕಾರವು ಯಾವುದಾದರೂ ವಿವರಣೆಯನ್ನು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಿದ್ದರೆ ಅವುಗಳನ್ನು ಪರ್ಯಾಲೋಚಿಸತಕ್ಕದ್ದು.

(2) ಪ್ರಾಧಿಕಾರವನ್ನು ರದ್ದುಪಡಿಸಿ ಉಪಪ್ರಕರಣ (1)ರ ಮೇರೆಗೆ ಅಧಿಸೂಚನೆಯನ್ನು ಪ್ರಕಟಿಸಿದ ನಂತರ,-

(ಎ) ಪ್ರಾಧಿಕಾರದ ಎಲ್ಲ ಸದಸ್ಯರು, ಅವರ ಪದಾವಧಿಯು ಮುಕ್ತಾಯವಾಗಿಲ್ಲದಿದ್ದರೂ, ಪ್ರಾಧಿಕಾರವನ್ನು ರದ್ದುಪಡಿಸಿದ ದಿನಾಂಕದಿಂದ ಅವರ ಸದಸ್ಯ ಪದಗಳನ್ನು ತೆರವು ಮಾಡತಕ್ಕದ್ದು;

(ಬಿ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಪ್ರಾಧಿಕಾರವು ಅಥವಾ ಅದರ ಪರವಾಗಿ ಚಲಾಯಿಸಬಹುದಾದಂಥ ಎಲ್ಲಾ ಅಧಿಕಾರಗಳನ್ನು, ಮತ್ತು ನಿರ್ವಹಿಸಬಹುದಾದಂಥ ಎಲ್ಲಾ ಕರ್ತವ್ಯಗಳನ್ನು, ಪ್ರಾಧಿಕಾರವನ್ನು ರದ್ದುಪಡಿಸಿರುವ ಅವಧಿಯಲ್ಲಿ ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ವ್ಯಕ್ತಿಯು ಅಥವಾ ವ್ಯಕ್ತಿಗಳು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು;

(ಸಿ) ಪ್ರಾಧಿಕಾರದಲ್ಲಿ ನಿಹಿತವಾಗಿದ್ದ ಎಲ್ಲ ಸ್ವತ್ತುಗಳು, ಪ್ರಾಧಿಕಾರವನ್ನು ರದ್ದುಪಡಿಸಿರುವ ಅವಧಿಯಲ್ಲಿ ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವಂಥ, ಪ್ರಾಧಿಕಾರವನ್ನು ರದ್ದುಪಡಿಸಿರುವ ಅವಧಿಯು ಮುಕ್ತಾಯವಾದ ತರುವಾಯ, ಕೇಂದ್ರ ಸರ್ಕಾರವು,-

(ಎ) ಪ್ರಾಧಿಕಾರವನ್ನು ರದ್ದುಪಡಿಸಿರುವ ಅವಧಿಯನ್ನು ಮತ್ತಷ್ಟು ಅವಧಿಯವರೆಗೆ ವಿಸ್ತರಿಸುವುದು ಅವಶ್ಯವೆಂದು ಭಾವಿಸಿದರೆ ಕೇಂದ್ರ ಸರ್ಕಾರವು ಹಾಗೆ ಮಾಡಬಹುದು; ಅಥವಾ

(ಬಿ) 4ನೇ ಪ್ರಕರಣದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಪ್ರಾಧಿಕಾರವನ್ನು ಪುನರ್ ರಚಿಸಬಹುದು.

## ಅಧ್ಯಾಯ III

### ನೋಂದಣಿ

**12. ರಫ್ತುಗಾರರ ನೋಂದಣಿ.–** (1) ಯಾವುದಾದರೂ ಒಂದು ಅಥವಾ ಹೆಚ್ಚು ಅನುಸೂಚಿತ ಉತ್ಪನ್ನಗಳನ್ನು ರಫ್ತು ಮಾಡುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು, ಹಾಗೆ ರಫ್ತು ಮಾಡುವುದನ್ನು ಅವನು ಪ್ರಾರಂಭಿಸುವ ದಿನಾಂಕದಿಂದ ಒಂದು ತಿಂಗಳು ಮುಕ್ತಾಯವಾಗುವುದಕ್ಕೆ ಮೊದಲು ಅಥವಾ ಈ ಪ್ರಕರಣವು ಜಾರಿಗೆ ಬರುವ ದಿನಾಂಕದಿಂದ ಮೂರು ತಿಂಗಳು ಮುಕ್ತಾಯವಾಗುವುದಕ್ಕೆ ಮೊದಲು, ಇವೆರಡರಲ್ಲಿ ಯಾವುದು ನಂತರವೋ ಆ ಕಾಲದೊಳಗೆ ಅನುಸೂಚಿತ ಉತ್ಪನ್ನದ ಅಥವಾ ಅನುಸೂಚಿತ ಉತ್ಪನ್ನಗಳ ರಫ್ತುಗಾರನೆಂಬುದಾಗಿ ನೋಂದಾಯಿಸಿಕೊಳ್ಳಲು ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು:

ಪರಂತು, ಪ್ರಾಧಿಕಾರವು ಸಾಕಷ್ಟು ಕಾರಣಕ್ಕಾಗಿ ನೋಂದಣಿಗಾಗಿಯ ಕಾಲಮಿತಿಯನ್ನು ಅದು ಸೂಕ್ತವೆಂದು ಭಾವಿಸುವಂಥ ಅವಧಿಯವರೆಗೆ ವಿಸ್ತರಿಸಬಹುದು.

(2) ಒಮ್ಮೆ ಮಾಡಿದ ನೋಂದಣಿಯು ಪ್ರಾಧಿಕಾರವು ಅದನ್ನು ರದ್ದುಪಡಿಸುವವರೆಗೆ ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು.

**13. ನೋಂದಣಿಗಾಗಿ, ನೋಂದಣಿಯನ್ನು ರದ್ದುಪಡಿಸುವುದಕ್ಕಾಗಿ ಅರ್ಜಿ, ಸಂದಾಯ ಮಾಡಬೇಕಾದ ಫೀಜು ಮತ್ತು ನೋಂದಣಿಗೆ ಸಂಬಂಧಿಸಿದ ಇತರ ವಿಷಯಗಳು.–** 12ನೇ ಪ್ರಕರಣದ ಮೇರೆಗೆ ನೋಂದಣಿಗಾಗಿ ಸಲ್ಲಿಸಬೇಕಾದ ಅರ್ಜಿಯ ಮತ್ತು ಅಂಥ ನೋಂದಣಿಯನ್ನು ರದ್ದುಪಡಿಸುವುದಕ್ಕಾಗಿ ಸಲ್ಲಿಸಬೇಕಾದ ಅರ್ಜಿಯ ನಮೂನೆ, ಅಂಥ ಅರ್ಜಿಗಳೊಂದಿಗೆ ಸಂದಾಯ ಮಾಡಬೇಕಾದ ಫೀಜು, ಅಂಥ ಅರ್ಜಿಗಳಲ್ಲಿ ಒಳಗೊಂಡಿರಬೇಕಾದ ವಿವರಗಳು, ನೋಂದಣಿಯನ್ನು ಮಂಜೂರು ಮಾಡುವಾಗ ಮತ್ತು ರದ್ದು ಮಾಡುವಾಗ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಪ್ರಾಧಿಕಾರವು ಇಟ್ಟುಕೊಂಡು ಬರಬೇಕಾದ ರಿಜಿಸ್ಟರುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**14. ರಫ್ತುಗಾರರು ಸಲ್ಲಿಸಬೇಕಾದ ವಿವರಪಟ್ಟಿಕೆಗಳು.–** (1) ಪ್ರಕರಣ 12ರ (1)ನೇ ಉಪಪ್ರಕರಣದಲ್ಲಿ ತಿಳಿಸಿರುವ ಪ್ರತಿಯೊಬ್ಬ ರಫ್ತುಗಾರನು, ನಿಯಮಿಸಬಹುದಾದಂಥ ವಿವರ ಪಟ್ಟಿಕೆಗಳನ್ನು, ನಿಯಮಿಸಿದ ಕಾಲದಲ್ಲಿ ಮತ್ತು ನಿಯಮಿಸಿದ ನಮೂನೆಯಲ್ಲಿ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(2) ಪ್ರಾಧಿಕಾರವು, ಈ ಪ್ರಕರಣದ ಮೇರೆಗೆ ರಫ್ತುಗಾರರು ಸಲ್ಲಿಸಿದ ಯಾವುದೇ ವಿವರಪಟ್ಟಿಕೆಗಳ ನಿಖರತೆಯನ್ನು ಪರಿಶೀಲಿಸಲು ಯಾವುದೇ ಕಾಲದಲ್ಲಿ ರಫ್ತುಗಾರನ ಯಾವುದೇ ಸಂಸ್ಕರಣಾ ಸ್ಥಾವರವನ್ನು ಅಥವಾ ಯಾವುದೇ ಇತರ ಕಾರ್ಯಸಂಸ್ಥೆಯನ್ನು ತಪಾಸಣೆ ಮಾಡುವ ಸಲುವಾಗಿ ಒಬ್ಬ ಸದಸ್ಯನಿಗೆ ಅಥವಾ ಅದರ ಯಾರೇ ಅಧಿಕಾರಿಗೆ ಅಧಿಕಾರ ನೀಡಬಹುದು.

## ಅಧ್ಯಾಯ IV

## ಹಣಕಾಸು, ಲೆಕ್ಕ ಪತ್ರಗಳು ಮತ್ತು ಲೆಕ್ಕಪರಿಶೋಧನೆ

15. **ಕೇಂದ್ರ ಸರ್ಕಾರದಿಂದ ಅನುದಾನಗಳು ಮತ್ತು ಸಾಲಗಳು.**- ಕೇಂದ್ರ ಸರ್ಕಾರವು, ಈ ಸಂಬಂಧವಾಗಿ, ಸಂಸತ್ತು ಕಾನೂನಿನ ಮೂಲಕ ಕ್ರಮಬದ್ಧವಾಗಿ ಹಣವನ್ನು ಹಂಚಿಕೆ ಮಾಡಿದ ನಂತರ, ಈ ಅಧಿನಿಯಮದ ಉದ್ದೇಶಗಳಿಗೆ ಬಳಸಿಕೊಳ್ಳುವುದಕ್ಕಾಗಿ ಕೇಂದ್ರ ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಷ್ಟು ಹಣದ ಮೊತ್ತವನ್ನು ಅನುದಾನಗಳ ಅಥವಾ ಸಾಲಗಳ ರೂಪದಲ್ಲಿ ಪ್ರಾಧಿಕಾರಕ್ಕೆ ಸಂದಾಯ ಮಾಡಬಹುದು.

16. **ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ನಿಧಿಯ ಸ್ಥಾಪನೆ.**- (1) ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಆ ನಿಧಿಗೆ,-

(ಎ) ಈ ಸಂಬಂಧವಾಗಿ ಸಂಸತ್ತು ಕಾನೂನಿನ ಮೂಲಕ ಕ್ರಮಬದ್ಧವಾಗಿ ಹಣವನ್ನು ಹಂಚಿಕೆ ಮಾಡಿದ ನಂತರ, ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಉಪಕರ ಅಧಿನಿಯಮ, 1985ರ 4ನೇ ಪ್ರಕರಣದ ಮೇರೆಗೆ ಜಮೆಯಾದ ಉಪಕರದ ಉತ್ಪತ್ತಿಯಿಂದ, ಆ ಉಪಕರದ ಸಂಗ್ರಹಣೆಗೆ ಆದ ವೆಚ್ಚಗಳನ್ನು ಮತ್ತು ಯಾವುದಾದರೂ ಹಣವನ್ನು ಮರುಸಂದಾಯ ಮಾಡಿದ್ದರೆ ಆ ಹಣವನ್ನು ಕಳೆದ ನಂತರ, ಕೇಂದ್ರ ಸರ್ಕಾರವು ನೀಡಬಹುದಾದ ಯಾವುದೇ ಹಣದ ಮೊತ್ತವನ್ನು;

(ಬಿ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ನೋಂದಣಿಯ ಮತ್ತು ಇತರ ವಿಷಯಗಳ ಸಂಬಂಧದಲ್ಲಿ ವಿಧಿಸಿದ ಮತ್ತು ಸಂಗ್ರಹಿಸಿದ ಎಲ್ಲಾ ಫೀಜುಗಳನ್ನು;

(ಸಿ) ಈ ಅಧಿನಿಯಮದ ಉದ್ದೇಶಗಳಿಗಾಗಿ 15ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ನೀಡಬಹುದಾದ ಯಾವುದೇ ಅನುದಾನಗಳನ್ನು ಅಥವಾ ಸಾಲಗಳ ಹಣವನ್ನು; ಮತ್ತು

(ಡಿ) ಈ ಅಧಿನಿಯಮದ ಉದ್ದೇಶಗಳಿಗಾಗಿ ಯಾವುದೇ ರಾಜ್ಯ ಸರ್ಕಾರವು, ಸ್ವಯಂ ಸೇವಾ ಸಂಸ್ಥೆಯು ಅಥವಾ ಇತರ ಸಂಸ್ಥೆಯು ನೀಡಬಹುದಾದ ಯಾವುದೇ ಅನುದಾನಗಳನ್ನು ಅಥವಾ ಸಾಲಗಳ ಹಣವನ್ನು

– ಜಮೆ ಮಾಡತಕ್ಕದ್ದು:

ಪರಂತು, ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದ ಹೊರತು ಯಾವುದೇ ಅಂಥ ಅನುದಾನವನ್ನು, ಸಾಲಗಳ ಹಣವನ್ನು ಅಥವಾ ದೇಣಿಗೆಯನ್ನು ನಿಧಿಗೆ ಜಮೆ ಮಾಡತಕ್ಕದ್ದಲ್ಲ.

(2) ನಿಧಿಯನ್ನು,–

(ಎ) 10ನೇ ಪ್ರಕರಣದಲ್ಲಿ ತಿಳಿಸಿದ ಕ್ರಮಗಳಿಗೆ ಆದ ವೆಚ್ಚಗಳನ್ನು ಭರಿಸಲು;

(ಬಿ) ಪ್ರಾಧಿಕಾರದ, ಸಂದರ್ಭಾನುಸಾರ, ಸದಸ್ಯರ, ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳಗಳನ್ನು, ಭತ್ಯೆಗಳನ್ನು ಮತ್ತು ಇತರ ಸಂಭಾವನೆಗಳನ್ನು ಸಂದಾಯ ಮಾಡಲು;

(ಸಿ) ಪ್ರಾಧಿಕಾರದ ಇತರ ಆಡಳಿತ ವೆಚ್ಚಗಳನ್ನು ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಧಿಕೃತಗೊಳಿಸಿದ ಯಾವುದೇ ಇತರ ವೆಚ್ಚಗಳನ್ನು ಭರಿಸಲು; ಮತ್ತು

(ಡಿ) ಯಾವುದೇ ಸಾಲವನ್ನು ಮರುಸಂದಾಯ ಮಾಡಲು

– ಬಳಸಿಕೊಳ್ಳತಕ್ಕದ್ದು.

**17. ಸಾಲ ಪಡೆಯಲು ಪ್ರಾಧಿಕಾರಕ್ಕೆ ಇರುವ ಅಧಿಕಾರ.**– ಪ್ರಾಧಿಕಾರವು, ಈ ಸಂಬಂಧವಾಗಿ ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ನಿಧಿಯನ್ನು ಅಥವಾ ಯಾವುದೇ ಇತರ ಆಸ್ತಿಯನ್ನು ಭದ್ರತೆಯಾಗಿ ನೀಡಿ ಸಾಲ ಪಡೆಯಲು ಅಧಿಕಾರ ಹೊಂದಿರತಕ್ಕದ್ದು.

**18. ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.**– (1) ಕೇಂದ್ರ ಸರ್ಕಾರವು, ಭಾರತದ ಲೆಕ್ಕ ನಿಯಂತ್ರಕ ಹಾಗೂ ಮಹಾಲೆಕ್ಕ ಪರಿಶೋಧಕನೊಂದಿಗೆ ಸಮಾಲೋಚಿಸಿ, ನಿಯಮಿಸಬಹುದಾದಂಥ

ನಮೂನೆಯಲ್ಲಿ ಪ್ರಾಧಿಕಾರವು ಲೆಕ್ಕಪತ್ರಗಳನ್ನು ಮತ್ತು ಸಂಬಂಧಪಟ್ಟ ಇತರ ದಾಖಲೆಗಳನ್ನು ಇಡತಕ್ಕದ್ದು ಮತ್ತು ಲೆಕ್ಕಪತ್ರಗಳ ವಾರ್ಷಿಕ ವಿವರ ಪತ್ರವನ್ನು ಸಿದ್ಧಪಡಿಸತಕ್ಕದ್ದು.

(2) ಪ್ರಾಧಿಕಾರದ ಲೆಕ್ಕಪತ್ರಗಳನ್ನು ಭಾರತದ ಲೆಕ್ಕ ನಿಯಂತ್ರಕ–ಹಾಗೂ–ಮಹಾಲೆಕ್ಕ ಪರಿಶೋಧಕನು ತಾನು ನಿರ್ದಿಷ್ಟಪಡಿಸಬಹುದಾದಂಥ ಮಧ್ಯಂತರಗಳಲ್ಲಿ ಲೆಕ್ಕ ಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಮಾಡಿದ ಯಾವುದೇ ವೆಚ್ಚವನ್ನು ಲೆಕ್ಕ ನಿಯಂತ್ರಕನಿಗೆ–ಹಾಗೂ–ಮಹಾಲೆಕ್ಕ ಪರಿಶೋಧಕನಿಗೆ ಪ್ರಾಧಿಕಾರವು ಸಂದಾಯ ಮಾಡತತಕ್ಕದ್ದು.

(3) ಭಾರತದ ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕ ಪರಿಶೋಧಕನು ಮತ್ತು ಪ್ರಾಧಿಕಾರದ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡುವ ಸಂಬಂಧದಲ್ಲಿ ಅವನು ನೇಮಕ ಮಾಡಿದ ಯಾರೇ ಇತರ ವ್ಯಕ್ತಿಯು, ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕ ಪರಿಶೋಧಕನು ಸರ್ಕಾರಿ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಸಾಮಾನ್ಯವಾಗಿ ಹೊಂದಿರುವಂಥವೇ ಹಕ್ಕುಗಳನ್ನು, ವಿಶೇಷ ಅಧಿಕಾರಗಳನ್ನು ಮತ್ತು ಅಧಿಕಾರಗಳನ್ನು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಪಟ್ಟಂತೆ ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ, ಲೆಕ್ಕ ಪುಸ್ತಕಗಳನ್ನು, ಸಂಬಂಧಿಸಿದ ವೋಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ಕೋರುವ ಮತ್ತು ಪ್ರಾಧಿಕಾರದ ಯಾವುದೇ ಕಚೇರಿಯನ್ನು ಪರಿಶೀಲಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕ ಲೆಕ್ಕಪರಿಶೋಧಕನು ಅಥವಾ ಈ ಬಗ್ಗೆ ಅವನು ನೇಮಕ ಮಾಡಿದ ಯಾರೇ ಇತರ ವ್ಯಕ್ತಿಯು ಪ್ರಮಾಣೀಕರಿಸಿದ ಪ್ರಾಧಿಕಾರದ ಲೆಕ್ಕಪತ್ರಗಳನ್ನು ಅದರ ಮೇಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ಪ್ರತಿವರ್ಷವೂ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಇರಿಸತಕ್ಕದ್ದು.

## ಅಧ್ಯಾಯ V

## ಕೇಂದ್ರ ಸರ್ಕಾರದಿಂದ ನಿಯಂತ್ರಣ

19. **ಅನುಸೂಚಿತ ಉತ್ಪನ್ನಗಳ ಆಮದನ್ನು ಮತ್ತು ರಫ್ತನ್ನು ನಿಷೇಧಿಸಲು ಅಥವಾ ನಿಯಂತ್ರಿಸಲು ಅಧಿಕಾರ.**- (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಅನುಸೂಚಿತ ಉತ್ಪನ್ನಗಳ ಆಮದನ್ನು ಅಥವಾ ರಫ್ತನ್ನು, ಸಾಮಾನ್ಯವಾಗಿ ಅಥವಾ ನಿರ್ದಿಷ್ಟಪಡಿಸಿದ ಪ್ರಕರಣಗಳ ವರ್ಗಗಳಿಗೆ ಸಂಬಂಧಿಸಿದಂತೆ, ನಿಷೇಧಿಸುವುದಕ್ಕಾಗಿ, ನಿರ್ಬಂಧಿಸುವುದಕ್ಕಾಗಿ ಅಥವಾ ಬೇರೆ ರೀತಿಯಲ್ಲಿ ನಿಯಂತ್ರಿಸುವುದಕ್ಕಾಗಿ ಉಪಬಂಧ ಕಲ್ಪಿಸಬಹುದು.

(2) ಉಪಪ್ರಕರಣ (1)ರ ಮೇರೆಗಿನ ಯಾವುದೇ ಆದೇಶವು ಯಾವ ಅನುಸೂಚಿತ ಉತ್ಪನ್ನಗಳಿಗೆ ಅನ್ವಯಿಸುವುದೋ ಆ ಎಲ್ಲ ಅನುಸೂಚಿತ ಉತ್ಪನ್ನಗಳನ್ನು ಸೀಮಾ ಸುಂಕ ಅಧಿನಿಯಮ, 1962ರ (1962ರ 52) 11ನೇ ಪ್ರಕರಣದ ಮೇರೆಗೆ ಯಾವ ಸರಕುಗಳ ರಫ್ತನ್ನು ನಿಷೇಧಿಸಲಾಗಿದೆಯೋ ಆ ಸರಕುಗಳೆಂದು ಭಾವಿಸತಕ್ಕದ್ದು ಮತ್ತು ಆ ಅಧಿನಿಯಮದ ಎಲ್ಲ ಉಪಬಂಧಗಳು ತದನುಸಾರವಾಗಿ ಪರಿಣಾಮ ಹೊಂದಿರತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಯಾರೇ ವ್ಯಕ್ತಿಯು ಉಲ್ಲಂಘಿಸಿದರೆ ಅವನು, (2)ನೇ ಉಪಪ್ರಕರಣದ ಮೂಲಕ ಅನ್ವಯಿಸಲಾಗಿರುವಂತೆ, ಸೀಮಾ ಸುಂಕ ಅಧಿನಿಯಮ, 1962ರ (1962ರ 52) ಉಪಬಂಧಗಳ ಮೇರೆಗೆ ಅವನು ಯಾವ ಜಪ್ತಿಗೆ ಅಥವಾ ದಂಡನೆಗೆ ಬದ್ಧನಾಗುವನೋ ಆ ಯಾವುದೇ ಜಪ್ತಿಗೆ ಅಥವಾ ದಂಡನೆಗೆ ಬಾಧಕವಾಗದಂತೆ, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

**20. ಕೇಂದ್ರ ಸರ್ಕಾರದಿಂದ ನಿರ್ದೇಶನಗಳು.-** ಈ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕಾಗಿ ಕಾಲಕಾಲಕ್ಕೆ ಕೇಂದ್ರ ಸರ್ಕಾರವು ನೀಡಬಹುದಾದಂಥ ನಿರ್ದೇಶನಗಳನ್ನು ಪ್ರಾಧಿಕಾರವು ಪಾಲಿಸತಕ್ಕದ್ದು.

**21. ವಿವರಪಟ್ಟಿಕೆಗಳು ಮತ್ತು ವರದಿಗಳು.-** (1) ಪ್ರಾಧಿಕಾರವು, ಅನುಸೂಚಿತ ಉತ್ಪನ್ನಗಳ ರಫ್ತಿಗೆ ಉತ್ತೇಜನ ನೀಡುವುದಕ್ಕಾಗಿ ಮತ್ತು ರಫ್ತಿನ ಅಭಿವೃದ್ಧಿಗಾಗಿ ಉದ್ದೇಶಿಸಿರುವ ಅಥವಾ ಹಾಲಿ ಇರುವ ಯಾವುದೇ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಕೇಂದ್ರ ಸರ್ಕಾರವು ಅಗತ್ಯಪಡಿಸಬಹುದಾದಂಥ, ವಿವರಪಟ್ಟಿಕೆಗಳನ್ನು ಮತ್ತು ವಿವರಣಾ ಪತ್ರಗಳನ್ನು ಮತ್ತು ವಿವರಣೆಗಳನ್ನು ನಿಯಮಿಸಬಹುದಾದಂಥ ಅಥವಾ ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ಕಾಲದಲ್ಲಿ ಮತ್ತು ಅಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಒದಗಿಸತಕ್ಕದ್ದು.

(2) ಉಪಪ್ರಕರಣ (1)ರ ಉಪಬಂಧಗಳಿಗೆ ಬಾಧಕವಾಗದಂತೆ, ಪ್ರಾಧಿಕಾರವು, ಪ್ರತಿ ಹಣಕಾಸು ವರ್ಷವು ಮುಕ್ತಾಯವಾದ ತರುವಾಯ, ಸಾಧ್ಯವಾದಷ್ಟು ಬೇಗನೆ, ಹಿಂದಿನ ಹಣಕಾಸು ವರ್ಷದಲ್ಲಿನ ಅದರ ಕಾರ್ಯ ಚಟುವಟಿಕೆಗಳ, ಕಾರ್ಯನೀತಿಯ ಮತ್ತು ಕಾರ್ಯಕ್ರಮಗಳ ವಾಸ್ತವಿಕ ಮತ್ತು ಪೂರ್ಣ ವಿವರವನ್ನು ನೀಡುವ ವರದಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ದಿನಾಂಕಕ್ಕೆ ಮುಂಚೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(3) ಉಪಪ್ರಕರಣ (2)ರ ಮೇರೆಗೆ ಸ್ವೀಕರಿಸಿದ ವರದಿಯ ಪ್ರತಿಯನ್ನು ಅದನ್ನು ಸ್ವೀಕರಿಸಿದ ತರುವಾಯ, ಆದಷ್ಟು ಬೇಗನೆ, ಸಂಸತ್ತಿನ ಉಭಯ ಸದನಗಳ ಮುಂದೆ ಇಡತಕ್ಕದ್ದು.

## ಅಧ್ಯಾಯ VI

## ಸಂಕೀರ್ಣ

22. **ಸುಳ್ಳು ವರದಿಗಳನ್ನು ಸಲ್ಲಿಸಿದ್ದಕ್ಕೆ ದಂಡ.-** ಯಾವುದೇ ವಿವರಪಟ್ಟಿಕೆಯನ್ನು ಸಲ್ಲಿಸುವಂತೆ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಯಾವ ವ್ಯಕ್ತಿಯನ್ನು, ಅಗತ್ಯಪಡಿಸಲಾಗಿದೆಯೋ, ಆ ಯಾರೇ ವ್ಯಕ್ತಿಯು, ಅಂಥ ವಿವರಪಟ್ಟಿಕೆಯನ್ನು ಸಲ್ಲಿಸಲು ತಪ್ಪಿದರೆ ಅಥವಾ ಸುಳ್ಳಾಗಿರುವ ಮತ್ತು ಸುಳ್ಳು ಎಂದು ತನಗೆ ತಿಳಿದಿರುವ ಅಥವಾ ನಿಜವಾದುದೆಂದು ನಂಬಲಾಗದಂಥ ಯಾವುದೇ ವಿವರವನ್ನು ಒಳಗೊಂಡಿರುವ ವಿವರಪಟ್ಟಿಕೆಯನ್ನು ಸಲ್ಲಿಸಿದರೆ, ಅವನು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಶಿಕ್ಷೆಗೆ ಗುರಿಯಾಗತಕ್ಕದ್ದು.

23. **ಪ್ರಾಧಿಕಾರದ ಸದಸ್ಯನು ಅಥವಾ ಅಧಿಕಾರಿಯು, ಕರ್ತವ್ಯ ನಿರ್ವಹಿಸುತ್ತಿರುವಾಗ ಅವನಿಗೆ ಅಡ್ಡಿಪಡಿಸಿದುದಕ್ಕಾಗಿ ಮತ್ತು ಪುಸ್ತಕಗಳನ್ನು ಮತ್ತು ದಾಖಲೆಗಳನ್ನು ಹಾಜರುಪಡಿಸಲು ತಪ್ಪಿದ್ದಕ್ಕಾಗಿ ದಂಡನೆ.-** ಯಾರೇ ವ್ಯಕ್ತಿಯು,-

(ಎ) ಅಧ್ಯಕ್ಷನು ಲಿಖಿತದಲ್ಲಿ ಅಧಿಕೃತಗೊಳಿಸಿರುವ ಯಾರೇ ಸದಸ್ಯನು ಅಥವಾ ಕೇಂದ್ರ ಸರ್ಕಾರವು ಅಥವಾ ಪ್ರಾಧಿಕಾರವು ಈ ಸಂಬಂಧದಲ್ಲಿ ಅಧಿಕೃತಗೊಳಿಸಿರುವ ಪ್ರಾಧಿಕಾರದ ಯಾರೇ ಅಧಿಕಾರಿಯು ಅಥವಾ ಇತರ ನೌಕರನು, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ತನಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸುವಾಗ, ಅಥವಾ ಅವನಿಗೆ ವಹಿಸಿದ ಯಾವುದೇ ಕರ್ತವ್ಯವನ್ನು ನಿರ್ವಹಿಸುವಾಗ ಅವನಿಗೆ ಅಡ್ಡಿಪಡಿಸಿದರೆ; ಅಥವಾ

(ಬಿ) ಯಾವುದೇ ಲೆಕ್ಕ ಪುಸ್ತಕದ ಅಥವಾ ಇತರ ದಾಖಲೆಯ ನಿಯಂತ್ರಣವನ್ನು ಅಥವಾ ಅಭಿರಕ್ಷೆಯನ್ನು ಹೊಂದಿದ್ದು, ಅಂಥ ಪುಸ್ತಕವನ್ನು ಅಥವಾ ದಾಖಲೆಯನ್ನು ಹಾಜರುಪಡಿಸುವಂತೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಗತ್ಯಪಡಿಸಿದಾಗ, ಹಾಗೆ ಹಾಜರುಪಡಿಸಲು ತಪ್ಪಿದರೆ

- ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ, ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ಶಿಕ್ಷೆಗೆ ಗುರಿಯಾಗತಕ್ಕದ್ದು.

**24. ಇತರ ದಂಡನೆಗಳು.-** ಯಾವ ಉಪಬಂಧಗಳ ಉಲ್ಲಂಘನೆಗಾಗಿ 19ನೇ, 22ನೇ ಮತ್ತು 23ನೇ ಪ್ರಕರಣಗಳಲ್ಲಿ ಶಿಕ್ಷೆಯನ್ನು ಗೊತ್ತುಪಡಿಸಲಾಗಿದೆಯೋ ಆ ಉಪಬಂಧಗಳನ್ನು ಹೊರತುಪಡಿಸಿ, ಈ ಅಧಿನಿಯಮದ, ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳನ್ನು ಯಾರೇ ವ್ಯಕ್ತಿಯು ಉಲ್ಲಂಘಿಸಿದರೆ ಅಥವಾ ಉಲ್ಲಂಘಿಸಲು ಪ್ರಯತ್ನಿಸಿದರೆ ಅಥವಾ ಉಲ್ಲಂಘನೆಗೆ ದುಷ್ಪ್ರೇರಣೆ ನೀಡಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ, ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ಮತ್ತು ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ ಅಂಥ ಮೊದಲನೆಯ ಉಲ್ಲಂಘನೆಗಾಗಿ ಅಪರಾಧ ನಿರ್ಣಯವಾದ ತರುವಾಯ ಅಂಥ ಉಲ್ಲಂಘನೆಯು ಯಾವ ಅವಧಿಯಲ್ಲಿ ಮುಂದುವರಿಯುತ್ತದೋ ಆ ಅವಧಿಯಲ್ಲಿ, ಪ್ರತಿಯೊಂದು ದಿನಕ್ಕೆ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದ ಶಿಕ್ಷೆಗೆ ಗುರಿಯಾಗತಕ್ಕದ್ದು.

**25. ಕಂಪನಿಗಳಿಂದ ಅಪರಾಧಗಳು.-** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿದ್ದರೆ, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರವನ್ನು ನಡೆಸಲು ಮತ್ತು ಆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಸಹ ಆ ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧದ ವ್ಯವಹರಣೆಗೆ ಅವನು/ಅದು ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಒಳಗಾಗತಕ್ಕದ್ದು:

ಪರಂತು, ಆ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಯಲು ತಾನು ಯಥೋಚಿತವಾದ ಎಲ್ಲಾ ಜಾಗರೂಕತೆಯನ್ನು ವಹಿಸಿದ್ದನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಈ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿದ್ದರೆ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವರ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ಆರೋಪಿಸಿರುವುದು ರುಜುವಾತಾದರೆ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಒಳಗಾಗತಕ್ಕದ್ದು.

**ವಿವರಣೆ:-** ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ ಫರ್ಮಿನ ಪಾಲುದಾರ.

26. **ನ್ಯಾಯಾಲಯದ ಅಧಿಕಾರವ್ಯಾಪ್ತಿ.-** ಈ ಅಧಿನಿಯಮದ ಮೇರೆಗೆ ಶಿಕ್ಷಾರ್ಹವಾದ ಯಾವುದೇ ಅಪರಾಧವನ್ನು ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್‌ನ ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್‌ನ ನ್ಯಾಯಾಲಯಕ್ಕಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು ಅಧಿವಿಚಾರಣೆ ಮಾಡತಕ್ಕದ್ದಲ್ಲ.

27. **ಕೇಂದ್ರ ಸರ್ಕಾರದಿಂದ ಪೂರ್ವ ಮಂಜೂರಾತಿ.-** ಈ ಅಧಿನಿಯಮದ ಮೇರೆಗೆ ಶಿಕ್ಷಾರ್ಹವಾದ ಯಾವುದೇ ಅಪರಾಧದ ಬಗ್ಗೆ ಕೇಂದ್ರ ಸರ್ಕಾರದಿಂದ ಪೂರ್ವ ಮಂಜೂರಾತಿಯನ್ನು ಪಡೆದ ಹೊರತು ಯಾವ ಪ್ರಾಸಿಕ್ಯೂಷನ್ನನ್ನು ಹೂಡತಕ್ಕದ್ದಲ್ಲ.

28. **ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.-** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಕೇಂದ್ರ ಸರ್ಕಾರದ ಅಥವಾ ಪ್ರಾಧಿಕಾರದ ಅಥವಾ ಅದರಿಂದ ನೇಮಕಗೊಂಡ ಯಾವುದೇ ಸಮಿತಿಯ ಅಥವಾ ಆ ಪ್ರಾಧಿಕಾರದ ಅಥವಾ ಅಂಥ ಸಮಿತಿಯ ಯಾರೇ ಸದಸ್ಯನ ಅಥವಾ ಕೇಂದ್ರ ಸರ್ಕಾರದ ಅಥವಾ ಆ ಪ್ರಾಧಿಕಾರದ ಯಾರೇ ಅಧಿಕಾರಿಯ ಅಥವಾ ಇತರ ನೌಕರನ ಅಥವಾ ಕೇಂದ್ರ ಸರ್ಕಾರದಿಂದ ಅಥವಾ ಪ್ರಾಧಿಕಾರದಿಂದ ಅಧಿಕೃತಗೊಂಡ ಯಾರೇ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

29. **ಅಧಿಕಾರದ ಪ್ರತ್ಯಾಯೋಜನೆ.-** ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿಷಯಗಳ ಸಂಬಂಧದಲ್ಲಿ ಮತ್ತು ಯಾವುವಾದರು ಷರತ್ತುಗಳನ್ನು ನಿರ್ದಿಷ್ಟಪಡಿಸಿದ್ದರೆ ಆ ಷರತ್ತುಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ತಾನು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು (32ನೇ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸಲು ಇರುವ ಅಧಿಕಾರವನ್ನು ಹೊರತುಪಡಿಸಿ) ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಯು ಅಥವಾ ಪ್ರಾಧಿಕಾರಿಯು ಸಹ ಚಲಾಯಿಸಬಹುದೆಂದು ನಿರ್ದೇಶಿಸಬಹುದು.

**30. ಈ ಅಧಿನಿಯಮದ ಜಾರಿಯನ್ನು ಅಮಾನತ್ತಿನಲ್ಲಿಡುವುದು.**– ಈ ಅಧಿನಿಯಮದ ಮೂಲಕ ವಿಧಿಸಿದ ನಿರ್ಬಂಧಗಳಲ್ಲಿ ಕೆಲವು ನಿರ್ಬಂಧಗಳನ್ನು ವಿಧಿಸುವುದನ್ನು ನಿಲ್ಲಿಸುವ ಅವಶ್ಯಕತೆಯನ್ನುಂಟು ಮಾಡಿರುವ ಸಂದರ್ಭ ಸನ್ನಿವೇಶಗಳು ಉಂಟಾಗಿವೆಯೆಂದು ಕೇಂದ್ರ ಸರ್ಕಾರಕ್ಕೆ ಮನವರಿಕೆಯಾದರೆ ಅಥವಾ ಸಾರ್ವಜನಿಕ ಹಿತದೃಷ್ಟಿಯಿಂದ ಈ ಅಧಿನಿಯಮದ ಎಲ್ಲ ಅಥವಾ ಯಾವುವೇ ಉಪಬಂಧಗಳ ಜಾರಿಯನ್ನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟರ ಮಟ್ಟಿಗೆ ಮತ್ತು ಅನಿರ್ದಿಷ್ಟ ಕಾಲದವರೆಗೆ ಅಥವಾ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ, ಅಮಾನತ್ತಿನಲ್ಲಿಡುವುದು ಅಥವಾ ಸಡಿಲಗೊಳಿಸುವುದು ಅವಶ್ಯಕವೆಂದು ಅಥವಾ ವಿಹಿತವೆಂದು ಕೇಂದ್ರ ಸರ್ಕಾರವು ಪರಿಗಣಿಸಿದರೆ, ಅದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಹಾಗೆ ಮಾಡಬಹುದು.

(2) ಉಪಪ್ರಕರಣ (1)ರ ಮೇರೆಗೆ ಈ ಅಧಿನಿಯಮದ ಯಾವುದೇ ಉಪಬಂಧಗಳ ಜಾರಿಯನ್ನು ಅನಿರ್ದಿಷ್ಟ ಕಾಲದವರೆಗೆ ಅಮಾನತ್ತಿನಲ್ಲಿಟ್ಟಿದ್ದರೆ ಅಥವಾ ಸಡಿಲಗೊಳಿಸಿದ್ದರೆ, ಹಾಗೆ ಅಮಾನತ್ತಿನಲ್ಲಿಟ್ಟಿರುವುದನ್ನು ಅಥವಾ ಸಡಿಲಗೊಳಿಸಿರುವುದನ್ನು, ಈ ಅಧಿನಿಯಮವು ಜಾರಿಯಲ್ಲಿರುವ ಯಾವುದೇ ಕಾಲದಲ್ಲಿ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ರದ್ದುಪಡಿಸಬಹುದು.

**31. ಇತರ ಕಾನೂನುಗಳ ಅನ್ವಯಕ್ಕೆ ಪ್ರತಿಷೇಧ ಇಲ್ಲದಿರುವುದು.**– ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳ ಜೊತೆಗೆ ಇರತಕ್ಕದ್ದೇ ಹೊರತು ಅವುಗಳನ್ನು ಕುಂಠಿತಗೊಳಿಸುವಂತೆ ಅಲ್ಲ.

**32. ನಿಯಮಗಳನ್ನು ರಚಿಸಲು ಅಧಿಕಾರ.**– (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ, ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಪ್ರತಿಕೂಲಕವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) 4ನೇ ಪ್ರಕರಣದ (5)ನೇ ಉಪಪ್ರಕಣದ ಮೇರೆಗೆ, (4)ನೇ ಪ್ರಕರಣದ (4)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಹೇಳಿರುವ ಸದಸ್ಯರನ್ನು ಹೊರತುಪಡಿಸಿ ಇತರ ಸದಸ್ಯರ

ಪದಾವಧಿ, ಸದಸ್ಯರ ಸ್ಥಾನಗಳಲ್ಲಿ ತೆರವಾಗುವ ಸ್ಥಾನಗಳನ್ನು ಭರ್ತಿ ಮಾಡುವ ರೀತಿ, ಮತ್ತು ಸದಸ್ಯರು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅನುಸರಿಸಬೇಕಾದ ಕಾರ್ಯವಿಧಾನ;

(ಬಿ) 6ನೇ ಪ್ರಕರಣದ ಮೇರೆಗೆ ಅಧ್ಯಕ್ಷನು ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಯಾವ ಅಧಿಕಾರಗಳನ್ನು ಚಲಾಯಿಸಬೇಕೋ ಮತ್ತು ಯಾವ ಕರ್ತವ್ಯಗಳನ್ನು ನಿರ್ವಹಿಸಬೇಕೋ ಆ ಅಧಿಕಾರಿಗಳು ಮತ್ತು ಕರ್ತವ್ಯಗಳು;

(ಸಿ) 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರದ ಕಾರ್ಯದರ್ಶಿಯು ಯಾವ ಅಧಿಕಾರಗಳನ್ನು ಚಲಾಯಿಸಬೇಕೋ ಮತ್ತು ಯಾವ ಕರ್ತವ್ಯಗಳನ್ನು ನಿರ್ವಹಿಸಬೇಕೋ ಆ ಅಧಿಕಾರಗಳು ಮತ್ತು ಕರ್ತವ್ಯಗಳು;

(ಡಿ) ಯಾವ ನಿಯಂತ್ರಣಕ್ಕೆ ಮತ್ತು ನಿರ್ಬಂಧಗಳಿಗೊಳಪಟ್ಟು, 7ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ನೇಮಕ ಮಾಡಬೇಕೋ ಅ ನಿಯಂತ್ರಣ ಮತ್ತು ನಿರ್ಬಂಧಗಳು;

(ಇ) ಸಂಸ್ಕರಿತ ಆಹಾರಗಳ ರಫ್ತು ಸಂವರ್ಧನಾ ಪರಿಷತ್ತಿನ ಅಧಿಕಾರಿಗಳು ಮತ್ತು ನೌಕರರು 8ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಯಾವ ನಮೂನೆಯಲ್ಲಿ ಮತ್ತು ಯಾವ ಕಾಲದೊಳಗೆ ತಮ್ಮ ಒಪ್ಪಿಗೆಯನ್ನು ಕೊಡಬೇಕೋ ಆ ನಮೂನೆ ಮತ್ತು ಆ ಕಾಲ;

(ಎಫ್) 10ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಅನುಸೂಚಿತ ಉತ್ಪನ್ನಗಳ ರಫ್ತುಗಾರರ ನೋಂದಣಿಗಾಗಿ ಫೀಜಿನ ಸಂದಾಯ;

(ಜಿ) 10ನೇ ಪ್ರಕರಣದ (2)ನೇ ಉಪಪ್ರಕರಣದ (ಹೆಚ್) ಖಂಡದ ಮೇರೆಗೆ ಅನುಸೂಚಿತ ಉತ್ಪನ್ನಗಳಿಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಅಂಕಿ ಅಂಶಗಳನ್ನು ಮಾಲೀಕರುಗಳಲ್ಲದ ಯಾವ ವ್ಯಕ್ತಿಗಳಿಂದ ಸಂಗ್ರಹಿಸಬೇಕೋ ಆ ವ್ಯಕ್ತಿಗಳು;

(ಹೆಚ್) 10ನೇ ಪ್ರಕರಣದ (2)ನೇ ಉಪಪ್ರಕರಣದ (ಜೆ) ಖಂಡದ ಮೇರೆಗೆ ಪ್ರಾಧಿಕಾರವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಯಾವ ಹೆಚ್ಚುವರಿ ವಿಷಯಗಳ ಸಂಬಂಧದಲ್ಲಿ ಕ್ರಮಗಳನ್ನು ಕೈಗೊಳ್ಳಬೇಕೋ ಆ ಹೆಚ್ಚುವರಿ ವಿಷಯಗಳು;

(ಎಚ್ಎ) 10ಎ ಪ್ರಕರಣದ ಮೇರೆಗೆ ಬೌದ್ಧಿಕ ಸ್ವತ್ತಿನ ಹಕ್ಕುಗಳ ನೋಂದಣಿಗೆ ಮತ್ತು ರಕ್ಷಣೆಗೆ ಕ್ರಮಗಳು;

(ಐ) 13ನೇ ಪ್ರಕರಣದ ಮೇರೆಗೆ ನೋಂದಣಿಗಾಗಿ ಮತ್ತು ನೋಂದಣಿಯನ್ನು ರದ್ದುಪಡಿಸುವುದಕ್ಕಾಗಿ ಸಲ್ಲಿಸುವ ಅರ್ಜಿಯ ನಮೂನೆ ಮತ್ತು ಸಲ್ಲಿಸುವ ರೀತಿ, ಅಂಥ ಅರ್ಜಿಯೊಂದಿಗೆ ಸಂದಾಯ ಮಾಡಬೇಕಾದ ಫೀಜು ಮತ್ತು ನೋಂದಣಿಯ ಮಂಜೂರಾತಿಗೆ ಮತ್ತು ರದ್ದುಪಡಿಸುವುದಕ್ಕೆ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಅಂಥ ನೋಂದಣಿಗೆ ಅನ್ವಯವಾಗುವ ಷರತ್ತುಗಳು;

(ಜೆ) ಯಾವ ಕಾಲದಲ್ಲಿ ಮತ್ತು ಯಾವ ರೀತಿಯಲ್ಲಿ ರಫ್ತುಗಾರನು 14ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಿವರಪಟ್ಟಿಕೆಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಬೇಕೋ ಆ ಕಾಲ ಮತ್ತು ಆ ರೀತಿ;

(ಕೆ) ಯಾವ ನಮೂನೆಯಲ್ಲಿ ಪ್ರಾಧಿಕಾರದ ಲೆಕ್ಕಪತ್ರಗಳನ್ನು 18ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಇಡಬೇಕೋ ಆ ನಮೂನೆ;

(ಎಲ್) ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ಮತ್ತು ಯಾವ ಕಾಲದಲ್ಲಿ ಪ್ರಾಧಿಕಾರವು ವಿವರಪಟ್ಟಿಕೆಗಳನ್ನು ಮತ್ತು ವಿವರಣಾ ಪಟ್ಟಿಗಳನ್ನು ಕೆಂದ್ರ ಸರ್ಕಾರಕ್ಕೆ 21ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಬೇಕೋ ಆ ನಮೂನೆ ಮತ್ತು ಆ ರೀತಿ ಮತ್ತು ಆ ಕಾಲ;

(ಎಂ) ಯಾವ ನಮೂನೆಯಲ್ಲಿ ಮತ್ತು ಯಾವ ದಿನಾಂಕಕ್ಕೆ ಮುಂಚೆ ಪ್ರಾಧಿಕಾರವು ತನ್ನ ಚಟುವಟಿಕೆಗಳ ಮತ್ತು ಕಾರ್ಯಕ್ರಮಗಳ ವರದಿಯನ್ನು 21ನೇ ಪ್ರಕರಣದ (2)ನೇ ಉಪಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕೋ ಆ ನಮೂನೆ ಮತ್ತು ಆ ದಿನಾಂಕ;

(ಎನ್) ಈ ಅಧಿನಿಯಮದ ಮೇರೆಗೆ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಇತರ ಯಾವುದೇ ವಿಷಯ:

33. **ವಿನಿಯಮಗಳನ್ನು ರಚಿಸಲು ಅಧಿಕಾರ.-** (1) ಪ್ರಾಧಿಕಾರವು, ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿ ಪಡೆದು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಗಳಿಗಾಗಿ ಯಾವ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಅವಶ್ಯಕವೋ ಮತ್ತು ವಿಹಿತವೋ ಆ ಎಲ್ಲ ವಿಷಯಗಳಿಗೆ ಉಪಬಂಧ ಕಲ್ಪಿಸಲು ಈ ಅಧಿನಿಯದ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅಸಂಗತವಾಗಿರದಂಥ ವಿನಿಯಮಗಳನ್ನು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಪ್ರತಿಕೂಲಕವಾಗದಂತೆ ಅಂಥ ವಿನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳ ಬಗ್ಗೆ ಎಂದರೆ,-

(ಎ) 4ನೇ ಪ್ರಕರಣದ (8)ನೇ ಉಪಪ್ರಕರಣದ ಮೇರೆಗೆ, ಯಾವ ಕಾಲಗಳಲ್ಲಿ ಮತ್ತು ಯಾವ ಸ್ಥಳಗಳಲ್ಲಿ ಪ್ರಾಧಿಕಾರದ ಅಥವಾ ಅದರ ಯಾವುದೇ ಸಮಿತಿಯ ಸಭೆಗಳು ನಡೆಯಬೇಕೋ ಆ ಕಾಲದ ಬಗ್ಗೆ ಮತ್ತು ಆ ಸ್ಥಳಗಳ ಬಗ್ಗೆ ಮತ್ತು ಆ ಸಭೆಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನದ ಬಗ್ಗೆ ಮತ್ತು ಸಭೆಯ ಕೋರಂಗೆ ಅಗತ್ಯವಿರುವ ಸದಸ್ಯರ ಸಂಖ್ಯೆಯ ಬಗ್ಗೆ;

(ಬಿ) 7ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರದ ಯಾರೇ ಅಧಿಕಾರಿಗಳ ಮತ್ತು ಇತರ ನೌಕರರ ನೇಮಕದ ವಿಧಾನ, ಸೇವೆಯ ಷರತ್ತುಗಳು ಮತ್ತು ವೇತನ ಶ್ರೇಣಿಗಳ ಮತ್ತು ಭತ್ಯೆಗಳ ಬಗ್ಗೆ;

(ಸಿ) ಸಾಮಾನ್ಯವಾಗಿ ಪ್ರಾಧಿಕಾರದ ವ್ಯವಹಾರಗಳ ದಕ್ಷ ನಿರ್ವಹಣೆಯ ಬಗ್ಗೆ

- ಉಪಬಂಧ ಕಲ್ಪಿಸಬಹುದು.

(3) ಕೇಂದ್ರ ಸರ್ಕಾರವು, ತಾನು ಮಂಜೂರಾತಿ ನೀಡಿದ ಯಾವುದೇ ವಿನಿಯಮವನ್ನು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮಾರ್ಪಾಟುಗೊಳಿಸಬಹುದು ಅಥವಾ ರದ್ದುಗೊಳಿಸಬಹುದು ಮತ್ತು ಹಾಗೆ ಮಾರ್ಪಾಟು ಮಾಡಿದ ಅಥವಾ ರದ್ದುಮಾಡಿದ ವಿನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಮಾಡಿರುವುದು ಅಥವಾ ರದ್ದು ಮಾಡಿರುವುದು, ಅದನ್ನು ಮಾರ್ಪಾಟು ಮಾಡುವುದಕ್ಕೂ ಅಥವಾ ರದ್ದುಪಡಿಸಿಕೊಳ್ಳುವುದಕ್ಕೂ ಮೊದಲೇ ಆ ವಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯದ ಕಾನೂನು ಮಾನ್ಯತೆಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**34. ನಿಯಮಗಳನ್ನು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಮಂಡಿಸುವುದು.**- ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಪ್ರತಿಯೊಂದು ವಿನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ

ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ಸಂದರ್ಭಾನುಸಾರ ಆ ವಿನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ಸಂದರ್ಭಾನುಸಾರ ಆ ವಿನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ಆ ವಿನಿಯಮವು, ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಅಥವಾ ಆ ವಿನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**35. ಸಿಂಧುತ್ವ.–** 2008ರ ಅಕ್ಟೋಬರ್ ಹದಿಮೂರನೆಯ ದಿನದಂದು ಅಥವಾ ಆ ತರುವಾಯ ಪ್ರಾರಂಭವಾಗುವ ಮತ್ತು ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2009ರ ಪ್ರಾರಂಭದ ದಿನಾಂಕಕ್ಕೆ ನಿಕಟಪೂರ್ವದ ದಿನಾಂಕದಂದು ಕೊನೆಗೊಳ್ಳುವ ಅವಧಿಯಲ್ಲಿ ಮಾಡಿದ ಅಥವಾ ಮಾಡದೇ ಬಿಟ್ಟುಬಿಟ್ಟಿರುವ ಎಲ್ಲಾ ಕಾರ್ಯಗಳನ್ನು ಮತ್ತು ಕೈಗೊಂಡ ಅಥವಾ ಕೈಗೊಂಡಿರದ ಎಲ್ಲಾ ಕೆಲಸಗಳನ್ನು ಅಥವಾ ಕ್ರಮಗಳನ್ನು ಅಂಥ ಅವಧಿಯಲ್ಲಿ, ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ 2009ರ ಮೂಲಕ ತಿದ್ದುಪಡಿಯಾದ ಈ ಅಧಿನಿಯಮದ ಉಪಬಂಧಗಳು ಜಾರಿಯಲ್ಲಿದ್ದಿದ್ದರೆ, ಹೇಗೆ ಆ ಕಾರ್ಯವನ್ನು ಮಾಡಿದ ಅಥವಾ ಮಾಡದೆ ಬಿಟ್ಟುಬಿಟ್ಟ ಕಾರ್ಯವೆಂಬುದಾಗಿ ಅಥವಾ ಅಂಥ ಕೆಲಸಗಳನ್ನು ಅಥವಾ ಕ್ರಮಗಳನ್ನು ಕೈಗೊಂಡಿದ್ದ ಅಥವಾ ಕೈಗೊಂಡಿರದಿದ್ದ ಕೆಲಸಗಳೆಂಬುದಾಗಿ ಅಥವಾ ಕ್ರಮಗಳೆಂಬುದಾಗಿ ಭಾವಿಸಲಾಗುತ್ತಿತ್ತೋ ಹಾಗೆಯೇ ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮದ, 2009ರ ಮೂಲಕ ತಿದ್ದುಪಡಿಯಾದ ಈ ಅಧಿನಿಯಮದ ಉಪಬಂಧಗಳಿಗೆ ಅಂಥ ಕಾರ್ಯಗಳು, ಕೆಲಸಗಳು ಅಥವಾ ಕ್ರಮಗಳು ಅಸಂಗತವಾಗದಿರುವಷ್ಟರ ಮಟ್ಟಿಗೆ, ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2009ರ ಮೂಲಕ ತಿದ್ದುಪಡಿಯಾದ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಿದ ಅಥವಾ ಮಾಡದೇ ಬಿಟ್ಟುಬಿಟ್ಟ ಕಾರ್ಯಗಳೆಂದು ಮತ್ತು ಕೈಗೊಂಡಿದ್ದ ಅಥವಾ ಕೈಗೊಂಡಿರದಿದ್ದ ಕೆಲಸಗಳೆಂದು ಅಥವಾ ಕ್ರಮಗಳೆಂದು ಭಾವಿಸತಕ್ಕದ್ದು.

## ಮೊದಲನೆ ಅನುಸೂಚಿ

**(2 (ಐ) ಪ್ರಕರಣವನ್ನು ನೋಡಿ)**

1. ಹಣ್ಣುಗಳು, ತರಕಾರಿಗಳು ಮತ್ತು ಅವುಗಳ ಉತ್ಪನ್ನಗಳು
2. ಮಾಂಸ ಮತ್ತು ಮಾಂಸದ ಉತ್ಪನ್ನಗಳು
3. ಕೋಳಿ ಸಾಕಣೆ ಮತ್ತು ಕೋಳಿ ಸಾಕಣೆಯ ಉತ್ಪನ್ನಗಳು
4. ಹೈನು ಉತ್ಪನ್ನಗಳು
5. ಮಿಠಾಯಿಗಳು, ಬಿಸ್ಕಿತ್ತುಗಳು ಮತ್ತು ಬೇಕರಿ ಉತ್ಪನ್ನಗಳು
6. ಜೇನುತುಪ್ಪ, ಬೆಲ್ಲ ಮತ್ತು ಸಕ್ಕರೆ ಉತ್ಪನ್ನಗಳು
7. ಕೋಕೋ ಮತ್ತು ಅದರ ಉತ್ಪನ್ನಗಳು, ಎಲ್ಲಾ ಬಗೆಯ ಚಾಕಲೇಟ್‌ಗಳು
8. ಆಲ್ಕೋಹಾಲ್ ಪಾನೀಯಗಳು ಮತ್ತು ಆಲ್ಕೋಹಾಲ್ ರಹಿತ ಪಾನೀಯಗಳು
9. ಧಾನ್ಯಗಳ ಉತ್ಪನ್ನಗಳು
10. ಗೋಡಂಬಿ, ಕಡಲೆಕಾಯಿ, ಕಡಲೆ ಬೀಜ ಮತ್ತು ವಾಲ್‌ನಟ್‌ಗಳು
11. ಉಪ್ಪಿನ ಕಾಯಿಗಳು, ಚಟ್ನಿಗಳು ಮತ್ತು ಹಪ್ಪಳಗಳು
12. ಗೋರ್ ಗಂ
13. ಪುಷ್ಪಕೃಷಿ ಮತ್ತು ಪುಷ್ಪಕೃಷಿಯ ಉತ್ಪನ್ನಗಳು
14. ಮೂಲಿಕೆಗಳು ಮತ್ತು ಔಷಧೀಯ ಸಸ್ಯಗಳು

## ಎರಡನೆಯ ಅನುಸೂಚಿ

**(2 (ಜೆ) ಪ್ರಕರಣವನ್ನು ನೋಡಿ)**

ಬಾಸ್ಮತಿ ಅಕ್ಕಿ

***************